# ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

## ಕರ್ನಾಟಕ ಪಂಚಾಯತ್ ರಾಜ್(ನೈರ್ಮಲ್ಯ ಮತ್ತು ದ್ರವ ತ್ಯಾಜ್ಯ ನಿರ್ವಹಣೆ) ಮಾದರಿ ಉಪವಿಧಿಗಳು, 2019

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 316ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಗ್ರಾಮ ಪಂಚಾಯತಿಗಳ ಭೌಗೋಳಿಕ ವ್ಯಾಪ್ತಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ (ನೈರ್ಮಲ್ಯ ಮತ್ತು ದ್ರವ ತ್ಯಾಜ್ಯ ನಿರ್ವಹಣೆ)ಕರಡು ಮಾದರಿ ಉಪವಿಧಿಗಳನ್ನು ಪ್ರಸ್ತಾವಿಸಿದ್ದು, ಸದರಿ ಅಧಿನಿಯಮದ ಪ್ರಕರಣ 316(1)ರಡಿಯಲ್ಲಿ ಅಗತ್ಯ ಪಡಿಸಿರುವಂತೆ ಅದನ್ನು ಈ ಮೂಲಕ ಪ್ರಕಟಿಸಲಾಗಿದೆ. ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಮತ್ತು ಸದರಿ ಕರಡನ್ನು ಅದು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 30 (ಮೂವತ್ತು) ದಿವಸಗಳ ತರುವಾಯ ಪರಿಗಣಿಸಲಾಗುವುದೆಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಮೇಲೆ ನಿರ್ದಿಷ್ಟ ಪಡಿಸಿರುವ ಕಾಲಾವಧಿಯೊಳಗೆ ಯಾರೇ ವ್ಯಕ್ತಿಯಿಂದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ರಾಜ್ಯ ಸರ್ಕಾರದಿಂದ ಸ್ವೀಕೃತವಾದಲ್ಲಿ ಅವುಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಯುಕ್ತ ಪ್ರಾಧಿಕಾರದ ವಿಳಾಸಕ್ಕೆ ಕಳುಹಿಸಬಹುದು (ಹೆಸರು, ವಿಳಾಸ ಮತ್ತು ಯುಕ್ತ ಪ್ರಾಧಿಕಾರದ ಇ ಮೇಲ್ ವಿಳಾಸ)

## ಅಧ್ಯಾಯ – 1 : ಸಾಮಾನ್ಯ

### 1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯಿಕೆ

ಎ. ಈ ಉಪವಿಧಿಗಳನ್ನು ಕನಾಟಕ ಪಂಚಾಯತ್ ರಾಜ್ (ನೈರ್ಮಲ್ಯ ಮತ್ತು ದ್ರವ ತ್ಯಾಜ್ಯ ನಿರ್ವಹಣೆ) ಉಪವಿಧಿಗಳು, 2019 ಎಂದು ಕರೆಯಬಹುದು.

ಬಿ. ಈ ಉಪವಿಧಿಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಸಿ. ಈ ಉಪವಿಧಿಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರನ್ವಯ –ಜಾರಿಗೆ ಬರತಕ್ಕದ್ದು.

ಡಿ. ಈ ಉಪವಿಧಿಗಳು ಕೈಗಾರಿಕಾ ಘಟಕಗಳು ಮತ್ತು ಗ್ರಾಮ ಪಂಚಾಯತಿಗಳಲ್ಲಿ ಸ್ಥಾಪಿಸಿರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದ್ರವ ತ್ಯಾಜ್ಯಕ್ಕೆ (ತ್ಯಾಜ್ಯ ಜಲ(ನೀರು) ಅನ್ವಯವಾಗತಕ್ಕದ್ದಲ್ಲ.

### 2. ಪರಿಭಾಷೆಗಳು

ಈ ಉಪವಿಧಿಗಳಲ್ಲಿ ಇನ್ನಾವುದೇ ಪ್ರಾಸಂಗಿಕ ಸನ್ನಿವೇಶವು ಅಪೇಕ್ಷಿಸದ ಹೊರತು, ದಪ್ಪ ಅಕ್ಷರಗಳಲ್ಲಿನ ಪದಗಳು ಕೆಳಕಂಡ ಅರ್ಥವನ್ನು ಹೊಂದಿರತಕ್ಕದ್ದು.

(i) **'ಅಧಿನಿಯಮ'** ಎಂದರೆ ಕಾಲಕಾಲಕ್ಕೆ ತಿದ್ದುಪಡಿಯಾಗಬಹುದಾದ ಕರ್ನಾಟಕ ಪಂಚಾಯತ್ ರಾಜ್ಯ ಅಧಿನಿಯಮ, 1993.

(ii) **'ಏಜೆನ್ಸಿ'** ಎಂದರೆ ಗ್ರಾಮ ಪಂಚಾಯತಿಯಿಂದ ನೇಮಕ ಹೊಂದಿದ ಅಥವಾ ಪ್ರಾಧೀಕರಿಸಲಾದ ಅಥವಾ ರಾಜ್ಯ ಸರ್ಕಾರದಿಂದ ಗ್ರಾಮಪಂಚಾಯತಿಯ ಪರವಾಗಿ ಒಂದು ಕರಾರಿನ ಮೂಲಕ ಈ

ಉಪವಿಧಿಗಳನ್ವಯ ಕರ್ತವ್ಯಗಳು ಅಥವಾ ಕಾರ್ಯವನ್ನು ನಿರ್ವಹಿಸಿ ಕ್ರಮವಹಿಸುವಂತೆ ನಿರ್ದೇಶಿತವಾಗಿರುವ ಯಾವುದೇ ಸಂಘಟನೆಯನ್ನು ಒಳಗೊಂಡಂತೆ ಯಾರೇ ವ್ಯಕ್ತಿ ಅಥವಾ ಯಾವುದೇ ಸಂಸ್ಥೆ.

(iii)**'ಕಪ್ಪು ನೀರು'** ಎಂದರೆ ವಾಸದ ಮನೆಯ ಹಂತದಿಂದಾಗಲೀ ಅಥವಾ ವಾಣಿಜ್ಯ ಕೇಂದ್ರಗಳು, ಅಂಗನವಾಡಿಗಳು, ಶಾಲೆಗಳು, ಸಂಸ್ಥೆಗಳಿಂದಾಗಲೀ ಮಾನವ ತ್ಯಾಜ್ಯ ಮತ್ತು ಸ್ವಚ್ಛಗೊಳಿಸಿದ ನೀರೂ ಒಳಗೊಂಡಂತೆ ಶೌಚಾಲಯಗಳಿಂದ ಬರುವ ತ್ಯಾಜ್ಯ ನೀರು.

(iv)**'ಜೈವಿಕ ಘನವಸ್ತುಗಳು'** ಎಂದರೆ ವಾಸದ ಮನೆಗಳ ಒಳಚರಂಡಿ ನಿರ್ವಹಣಾ ಸೌಲಭ್ಯದಿಂದ ನಿರ್ವಹಣೆಯ ಫಲಿತವಾಗಿ ಉತ್ಪತ್ತಿಯಾಗುವ ಅತಿ ಹೆಚ್ಚಿನ ಮಟ್ಟದ ಸಾವಯವ ವಸ್ತುಗಳು.

(v) **'ಉಪವಿಧಿಗಳು'** ಎಂದರೆ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಕರ್ನಾಟಕ ಪಂಚಾಯತ್ ರಾಜ್ (ನೈರ್ಮಲ್ಯ ಮತ್ತು ದ್ರವ ತ್ಯಾಜ್ಯ) ಮಾದರಿ ಉಪವಿಧಿಗಳು, 2019.

(vi)**'ಸಾವಯವ(ಕಾಂಪೋಸ್ಟ್)'** ಎಂದರೆ ಸೂಕ್ಷ್ಮ ಜೀವಿಗಳು(Microbes)/ಎರೆ ಹುಳುಗಳು ಮತ್ತು ಜೈವಿಕ ವಿಘಟಿತ ವಸ್ತುಗಳಿಂದ ಪಡೆಯುವಂತಹ ಉತ್ಪನ್ನ.

(vii) **'ಸಿಪಿಸಿಬಿ'** ಎಂದರೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ

(viii)**ಸಮೂಹ'(ಗುಂಪು)'** ಎಂದರೆ ಘನ ತ್ಯಾಜ್ಯ ನಿರ್ವಹಣಾ ಸಂಸ್ಕರಣೆಯು ವ್ಯಾಪಿಸುವ ಸಲುವಾಗಿ ಭೌಗೋಳಿಕವಾಗಿ ಪರಸ್ಪರ ಒಟ್ಟುಗೂಡಿರುವ ಎರಡು ಅಥವಾ ಹೆಚ್ಚಿನ ಗ್ರಾಮ ಪಂಚಾಯತಿಗಳು

(ix) **ಸಮಿತಿಗಳು'** ಎಂದರೆ ಅಧಿನಿಯಮದ ಪ್ರಕರಣ 61–ಎರಡಿಯಲ್ಲಿ ಗ್ರಾಮ ಜಲ ಮತ್ತು ನೈರ್ಮಲ್ಯ ಸಮಿತಿಗಳು ಮತ್ತು ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಆಹಾರ ಸಮಿತಿಗಳು

(x)**'ನಿಯಂತ್ರಣಾ ವ್ಯವಸ್ಥೆ' ಎಂದರೆ** ಬಳಕೆದಾರರು ಎರಡು ಸ್ಥಳಗಳ ನಡುವಿನ ತ್ಯಾಜ್ಯವನ್ನು ಒಂದೇ ಬಾರಿ ಸ್ವಚ್ಛಗೊಳಿಸುವ ಸ್ಥಳದಲ್ಲಿನ ನೈರ್ಮಲ್ಯ ವ್ಯವಸ್ಥೆ. ಇದು ಒಳಪದರು ಹೊಂದಿರುವ ರೊಚ್ಚು ತೊಟ್ಟಿ (Septic tank) ಅಥವಾ ಒಳಪದರು ಹೊಂದಿರದ ಗುಂಡಿಯಾಗಿರಬಹುದು (leach pit) ಅಥವಾ ಉಭಯ ವ್ಯವಸ್ಥೆಗಳ ಸಂಯೋಜನೆಯೊಂದಿರಬಹುದು(ರೊಚ್ಚುಗುಂಡಿಯನ್ನು ಅನುಸರಣೆ ಮಾಡುವಂತಹ ಇಂಗುಗುಂಡಿಗಳ (soak-pit) ವಿಭಿನ್ನ ಹಂತಗಳಲ್ಲಿ ಸೂಕ್ತ ರೀತಿಯ ಸಂಸ್ಕರಣೆಗಾಗಿ ಸಂಯೋಜನೆಯಾಗಿರಬಹುದು.

(xi)**'ಚರಂಡಿ'** ಎಂದರೆ ಕೊಳಕು ನೀರು, ರೊಚ್ಚು ನೀರು, ತ್ಯಾಜ್ಯ ನೀರು ಅಥವಾ ಇತರ ಜಲಾಧಾರಿತ ತ್ಯಾಜ್ಯಗಳನ್ನು ಚರಂಡಿ ವ್ಯವಸ್ಥೆಯ ಮೂಲಕ ಹರಿಯಬಿಡುವುದು.

(xii)**'ರೊಚ್ಚು ತೆಗೆಯುವಿಕೆ'** ಎಂದರೆ ರೊಚ್ಚು ತೊಟ್ಟಿ, ಕರಗು ತೊಟ್ಟಿ, ಗುಂಡಿ ಶೌಚಾಲಯಗಳು ಅಥವಾ ಇನ್ನಿತರ ಯಾವುದೇ ನಿಯಂತ್ರಣಾ (ಒಳಗೊಳ್ಳುವ) ವ್ಯವಸ್ಥೆಗಳಿಂದ ರೊಚ್ಚನ್ನು ತೆಗೆದು ಹಾಕುವ ಪ್ರಕ್ರಿಯೆ.

(xiii)**'ಗೃಹೋತ್ಪಾದಕ'** ಎಂದರೆ ಈ ಅಧಿನಿಯಮದ ಉಪವಿಧಿಗಳ ಅನುಸೂಚಿ –1ರಡಿಯಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಹೊರತು ಪಡಿಸಿದ ಆವರಣಗಳ ಮಾಲೀಕ.

(xiv)**'ದ್ರವ ಹರಿವು'** ಎಂದರೆ ಯಾವುದೇ ಸಂಗ್ರಹಿತ ತೊಟ್ಟಿ ಅಥವಾ ಸಂಕರಣಾ ವ್ಯವಸ್ಥೆಯಿಂದ (ಉದಾ: ರೊಚ್ಚುತೊಟ್ಟಿಯಿಂದ ಹರಿಯುವಂತಹ ದ್ರವದ ಮೇಲಿನ ವಸ್ತು) ಹರಿಯುವ ದ್ರವ.

(xv**) ಮಾನವ ತ್ಯಾಜ್ಯ ರೊಚ್ಚು'** ಎಂದರೆ ಯಾವುದೇ ನಿಯಂತ್ರಕದಲ್ಲಿ(ಎತ್ತು ತೊಟ್ಟಿ ಮತ್ತು ರೊಚ್ಚು ತೊಟ್ಟಿಯಲ್ಲಿ ಸಂಗ್ರಹಿತವಾಗಿರುವ ಘನವಸ್ತು ಆದರೆ ಇದರಲ್ಲಿ ಇತರರಲ್ಲಿ ಪುರಸಭಾ ತ್ಯಾಜ್ಯ ನೀರು ಸಂಸ್ಕರಣಾ ಸ್ಥಾವರಗಳು ಒಳಗೊಳ್ಳುವುದಿಲ್ಲ.

(xvi)**'ಮಾನವ ತ್ಯಾಜ್ಯ (ಮಲ) ಸಂಸ್ಕರಣಾ ಸ್ಥಾವರ ಅಥವಾ ಎಫ್‌ಎಸ್‌ಟಿಪಿ'** ಎಂದರೆ ನಿಗದಿತ ಗುಣಮಟ್ಟದಲ್ಲಿ ಸುರಕ್ಷಿತ ವಿಲೇವಾರಿ ಮತ್ತು ಮರುಬಳಕೆಗಾಗಿ ನಿರ್ದಿಷ್ಟ ಮಾನವ ತ್ಯಾಜ್ಯ ಘನ ಮತ್ತು ದ್ರವರೂಪದ ಗಸಿಯನ್ನು ಪರಿಹರಿಸುವ ಉದ್ದೇಶಗಳಿಗಾಗಿ ನಿರ್ದಿಷ್ಟ ಪಡಿಸಿದ ಪ್ರಧೀಕೃತವಾದ ಸ್ವತಂತ್ರ ರೊಚ್ಚು ತೊಟ್ಟಿ ಮತ್ತು ಮಾನವ ತ್ಯಾಜ್ಯ ಗಸಿ ಸಂಸ್ಕರಣಾ ಸೌಲಭ್ಯ.

(xii)**'ಉತ್ಪಾದಕ'** ಎಂದರೆ ಈ ಉಪವಿಧಿಗಳ ಅನುಸೂಚಿ –1ರಲ್ಲಿ ಪಟ್ಟಿ ಮಾಡಿರುವಂತಹ ಗ್ರಾಮ ಪಂಚಾಯತಿಯಿಂದ ತೀರ್ಮಾನಿಸಲ್ಪಟ್ಟಿರುವ ಇತರ ಯಾರೇ ವ್ಯಕ್ತಿ ಅಥವಾ ಯಾವುದೇ ಆವರಣಗಳು ಮತ್ತು ಇದರಲ್ಲಿ ಉತ್ಪಾದಕರ ಸಮೂಹವನ್ನು ಒಳಗೊಳ್ಳುತ್ತದೆ.

(xvii)**'ಗ್ರಾಮ ಪಂಚಾಯತಿ'** ಎಂಬ ಪದವು ಅಧಿನಿಯಮದಲ್ಲಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

(xix)**'ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ'** ಎಂದರೆ ಅಧಿನಿಯಮದ ಪ್ರಕರಣ 309 ಮತ್ತು ಇನ್ನಿತರ ಅನ್ವಯಿಸುವಂತಹ ಉಪಬಂಧಗಳನ್ವಯ ಗ್ರಾಮ ಪಂಚಾಯತಿಗಳಿಂದ ರೂಪಿತವಾಗಿರುವ ಅಭಿವೃದ್ಧಿ ಯೋಜನೆ.

(XX)**'ಬೂದು ನೀರು ಅಥವಾ ಕೊಳಕು ನೀರು'** ಎಂದರೆ ಮಾನವ ತ್ಯಾಜ್ಯವನ್ನು ಒಳಗೊಳ್ಳದ ತ್ಯಾಜ್ಯ ನೀರು ಎಂದರೆ ಸ್ನಾನ ಮಾಡುವಾಗ, ಅಡಿಗೆ ಮಾಡುವಾಗ ಮತ್ತು ಸ್ವಚ್ಛಗೊಳಿಸುವ ಕಾರ್ಯಚಟುವಟಿಕೆಗಳಲ್ಲಿ ಅಡುಗೆ ಕೋಣೆ, ಸ್ನಾನದ ಮನೆಯಿಂದ ಉತ್ಪಾದನೆಯಾಗುವಂತಹ ತ್ಯಾಜ್ಯ ನೀರು ಮತ್ತು ಇದರಲ್ಲಿ ಕೃಷಿ, ಹೈನುಗಾರಿಕೆ ಮತ್ತು ಜಾನುವಾರು ಸಾಕಣೆಯಿಂದ ಉತ್ಪತ್ತಿಯಾಗುವಂತಹ ನೀರೂ ಸೇರಿದಂತೆ ವಾಣಿಜ್ಯ ಕೇಂದ್ರಗಳಿಂದ ಉತ್ಪಾದನೆಯಾಗುವಂತಹ ನೀರನ್ನೂ ಸಹ ಒಳಗೊಳ್ಳುತ್ತದೆ.

(xxi)ಕೆ.ಎಸ್.ಪಿ.ಸಿ.ಬಿ**' ಎಂದರೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ**

(xii)**'ದ್ರವ ತ್ಯಾಜ್ಯ'** ಎಂದರೆ ಕಪ್ಪು ನೀರು ಮತ್ತು/ಅಥವಾ ಬೂದು ನೀರು

(xiii)'ಸಂಚಾರಿ ಅಥವಾ ಸಂಚಾರ ರಹಿತ ಶೌಚಾಲಯಗಳ ಬಳಕೆ, ಮತ್ತು ಇದರಲ್ಲಿ ತ್ಯಾಜ್ಯವನ್ನು ತ್ಯಾಜ್ಯ ಮಾಲಿನ್ಯ(ಕಲುಷಿತ)ದಿಂದ ಉಂಟಾಗಬಹುದಾದ ಆರೋಗ್ಯಕ್ಕೆ ಅಪಾಯವನ್ನು ನಿರ್ಬಂಧಿಸುವ ಸಲುವಾಗಿ ಸಂಗ್ರಾಹಕಕ್ಕೆ(ನಿಯಂತ್ರಕ) ಅಥವಾ ಚರಂಡಿ ಹರಿವಿಗೆ ಸ್ವಚ್ಛ ಮಾಡಿ ಬಿಡಲಾಗುವುದು.

(xxiv)**'ಮಾನವನಿಂದ ಸ್ವಚ್ಛಗೊಳಿಸುವಿಕೆ'**ಯು ಮಾನವ ಸ್ವಚ್ಛಗಾರರಾಗಿ ನೇಮಕಾತಿ ನಿಷೇಧ ಮತ್ತು ಅವರುಗಳ ಪುನರ್ವಸತಿ ಅಧಿನಿಯಮ, 2013ರ ಪ್ರಕರಣ 2ರ ಉಪ ಖಂಡ(ಜಿ)ರಲ್ಲಿ ಪರಿಭಾಷಿಸಿರುವ ಅರ್ಥವನ್ನೇ ಹೊಂದಿರತಕ್ಕದ್ದು.

(xxv)**'ಗೃಹೋತ್ಪಾದಿತನಲ್ಲದ ಉತ್ಪಾದಕ'** ಎಂದರೆ ಅನುಸೂಚಿ –1ರಲ್ಲಿ ಪಟ್ಟಿ ಮಾಡಿರುವಂತಹ ವಾಣಿಜ್ಯ ಚಟುವಟಿಕೆಗಳು ನಡೆಯುವ ಆವರಣಗಳ ಮಾಲೀಕ.

(xxvi'**ಮಾಲೀಕ' ಎಂದರೆ** ಯಾವುದೇ ಆಸ್ತಿಗೆ ಸಂಬಂಧಿಸಿದಂತೆ ತನ್ನ ಸ್ವಂತಕ್ಕೇ ಆಗಲೀ ಅಥವಾ ಮತ್ತೊಬ್ಬ ವ್ಯಕ್ತಿಯ ಪರವಾಗಿ ಅಥವಾ ಧಾರ್ಮಿಕ ಅಥವಾ ಧರ್ಮದತ್ತಿಯ ಪರವಾಗಿ ಏಜೆಂಟನಾಗಿ, ಪಾರುಪತ್ಯಗಾರನಾಗಿ, ಪೋಷಕನಾಗಿ, ವ್ಯವಸ್ಥಾಪಕನಾಗಿ ಅಥವಾ ಸ್ವೀಕರ್ತನಾಗಿ ಸದರಿ ಆಸ್ತಿಗೆ ಸಂಬಂಧಿಸಿದ ಅಂತಹ ಪದವನ್ನು ಯಾವ ಉದ್ದೇಶಕ್ಕಾಗಿ ಬಳಕೆ ಮಾಡಲಾಗುತ್ತದೆಯೋ ಅಂತಹ ಬಾಡಿಗೆ ಅಥವಾ ಲಾಭವನ್ನು ತತ್ಕಾಲಕ್ಕೆ ಪಡೆಯುವ ಅಥವಾ ಪಡೆಯುವ ಹಕ್ಕುಳ್ಳವನಾಗಿರುವ ವ್ಯಕ್ತಿ ಮತ್ತು ಅಂತಹ ವ್ಯಕ್ತಿಯ ಹೆಸರಿನಲ್ಲಿ ಅಭಿವೃದ್ಧಿಗಾಗಿ ಅನುಮೋದನೆಯನ್ನು ಹೊರಡಿಸಿರುವಂತಹ ವ್ಯಕ್ತಿ.

(xxvii)**'ಸ್ವಾಧೀನಾನುಭವಿ'** ಎಂದರೆ ಯಾವುದೇ ಕಟ್ಟಡ ಅಥವಾ ಭೂಮಿ ಅಥವಾ ಅದರ ಯಾವುದೇ ಭಾಗದ ವಾಸ್ತವ ಸ್ವಾಧೀನಾನುಭವವನ್ನು ಹೊಂದಿರುವಂತಹ ಮತ್ತು ಬಾಡಿಗೆದಾರ ಅಥವಾ ಲೈಸೆನ್ಸುದಾರ, ಮತ್ತು ಅಂತಹ ಬಾಡಿಗೆದಾರ ಅಥವಾ ಲೈಸೆನ್ಸುದಾರನು ಬಾಡಿಗೆಯನ್ನು ಪಾವತಿ ಮಾಡಲು ಬದ್ಧನಾಗಿರಲಿ ಅಥವಾ ಇಲ್ಲದಿರಲಿ ಅಂತಹ ಯಾರೇ ವ್ಯಕ್ತಿ.

(xxviii)**'ನಿಷ್ಕ್ರಿಯ ಸಂಸ್ಕರಣಾ ವ್ಯವಸ್ಥೆಗಳು'** ಎಂದರೆ ನೈಸರ್ಗಿಕ ಆಧಾರಿತ ತಂತ್ರಜ್ಞಾನವನ್ನು ಬಳಸಿಕೊಳ್ಳುವ ವಿಧಾನವನ್ನು ವಿನ್ಯಾಸಗೊಳಿಸಿರುವಂತಹ ಮತ್ತು ವಿದ್ಯುತ್ ಅಥವಾ ಯಾಂತ್ರಿಕ ಇಂಧನವನ್ನು ಸಂಸ್ಕರಣಾ ಪ್ರಕ್ರಿಯೆಗೆ ಉಪಯೋಗಿಸದ ವ್ಯವಸ್ಥೆಗಳು

(xxix)**'ವ್ಯಕ್ತಿ'** ಎಂದರೆ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಂಘಟತೆ ಮತ್ತು ಇದರಲ್ಲಿ ಯಾವುದೇ ಅಂಗಡಿ, ವಾಣಿಜ್ಯ ಕೇಂದ್ರ, ಸಂಸ್ಥೆ, ಕಂಪನಿ, ನಿಗಮಿತವಾಗಿರುವ ಅಥವಾ ಆಗದೇ ಇರುವ ವ್ಯಕ್ತಿಗಳ ಸಂಘ ಅಥವಾ ಸಮೂಹವನ್ನು ಒಳಗೊಳ್ಳುತ್ತದೆ.

(xxx)**'ಗುಂಡಿ ಶೌಚಾಲಯ'**ವು ಮಾನವ ತ್ಯಾಜ್ಯವನ್ನು ಸಂಗ್ರಹಿಸುವ ಮತ್ತು ವಿಘಟಿಸುವ ಸಲುವಾಗಿ ಒಂದು ಅಥವಾ ಎರಡು ಗುಂಡಿಗಳನ್ನು ಹೊಂದಿರುವಂತಹ ಮತ್ತು ಅದರಿಂದ ದ್ರವವು ಸುತ್ತಲಿನ ಮಣ್ಣಿನಿಂದ ಹೀರಲ್ಪಡುವ ಯಾವುದೇ ಒಂದು ವಿವಿಕ್ತ (privy), ಜಲಮುಚ್ಚಿಕೆ(ಸಂಗ್ರಹಕೋಣೆ) ಮತ್ತು ಮೂತ್ರಾಲಯವನ್ನು ಒಳಗೊಳ್ಳುತ್ತದೆ.

(xxxi)**'ಆವರಣಗಳು'** ಕಟ್ಟಡಗಳು, ಕಟ್ಟಡದ ಭಾಗ, ಮನೆ, ಉಪಮನೆ (ಹೊರ ಮನೆ)(outhouse) ಲಾಯ, ಕೊಟ್ಟಿಗೆ, ಗುಡಿಸಿಲು, ಮತ್ತು ತೆರೆದ ಅಥವಾ ಮುಚ್ಚಲಾದ ಅಥವಾ ನಿರ್ಮಿತ ಅಥವಾ ನಿರ್ಮಿತವಲ್ಲದ ಅಥವಾ ವಾಸದ, ವ್ಯಾಪಾರದ, ಕೈಗಾರಿಕೆಯ, ಸೇವೆಯ, ವ್ಯವಹಾರದ, ಸರ್ಕಾರಿ ಅಥವಾ ಇತರ

ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಉದ್ದೇಶಗಳಿಗಾಗಿ, ವಿವಾಹ, ಔತಣಕೂಟ, ಸಭೆಗಳು, ವಸ್ತುಪ್ರದರ್ಶನಗಳು ಅಥಾ ಸಂಘಟಿತ ಸಮಾರಂಭಗಳನ್ನೂ ಒಳಗೊಂಡಂತಹ ಕಟ್ಟಡಗಳನ್ನು ಒಳಗೊಳ್ಳುತ್ತದೆ.

(xxxii)**'ನೈರ್ಮಲ್ಯ ಪ್ರೇರಕ'** ಎಂದರೆ ಭಾರತ ಸರ್ಕಾರದಿಂದ ಹೊರಡಿಸಲಾಗಿರುವ ಸ್ವಚ್ಛಭಾರತ ಮಾರ್ಗಸೂಚಿಗಳು, 2018ರನ್ವಯ, ಮತ್ತು/ಅಥವಾ ಇತರ ಯಾವುದೇ ತದನಂತರದ ಅನ್ವಯಿಕ ವಿನಿಯಮಗಳನ್ವಯ ಗ್ರಾಮ ಪಂಚಾಯತಿಗಳಲ್ಲಿನ ನೈರ್ಮಲ್ಯ ಸಂಬಂಧಿತ ಕಾರ್ಯಚಟುವಟಿಕೆಗಳಿಗಾಗಿ ಗ್ರಾಮ ಪಂಚಾಯತಿಯ ವತಿಯಿಂದ ನಿಯೋಜಿಸಲ್ಪಟ್ಟಿರುವ ಯಾರೇ ವ್ಯಕ್ತಿ.

(xxxiii)**ರೊಚ್ಚು 'ಎಂದರೆ** ಕೆಲವು ಕಾಲಗಳವರೆಗೆ ರೊಚ್ಚು ತೊಟ್ಟಿಯಲ್ಲಿ ಸಂಗ್ರಹಿತವಾಗುವಂತಹ ದ್ರವಗಳು, ಘನವಸ್ತುಗಳು (ರೊಚ್ಚು), ಮತ್ತು ಕೊಬ್ಬುಗಳು, ಎಣ್ಣೆ ಮತ್ತು ಗ್ರೀಸು ಅರೆ ಘನ ರೂಪದಲ್ಲಿ ಸಂಗ್ರಹವಾಗುವುದು.

(xxxiv)**'ರೊಚ್ಚು ತೊಟ್ಟಿ'** ಎಂದರೆ ತ್ಯಾಜ್ಯ ನೀರು ಘನವಸ್ತುಗಳ ಸಂಯೋಜನೆಯೊಂದಿಗೆ ಸಂಗ್ರಹವಾಗುವ ಮತ್ತು ಆಮ್ಲಜನಕ ಕರಗುವಿಕೆಯ ಸಂಸ್ಕರಣೆ ಮಾಡುವಂತಹ ಒಳ(ಭೂಗರ್ಭದಲ್ಲಿರುವ) ತೊಟ್ಟಿ.

(xxxv)**'ಚರಂಡಿ ರೊಚ್ಚು'** ಎಂದರೆ ಮಾನವ ತ್ಯಾಜ್ಯ ಮತ್ತು ಕಲ್ಮಶ ಅಂಶಗಳನ್ನು ಹೊಂದಿರುವಂತಹ ತ್ಯಾಜ್ಯ ನೀರು ಉತ್ಪಾದಕ.

(xxxvi)'ರೊಚ್ಚು ಸಂಸ್ಕರಣಾ ಸ್ಥಾವರ ಅಥವಾ ಎಸ್‌ಟಿಪಿ' **ಎಂದರೆ** ತೊಟ್ಟಿಗಳು, ಪರದೆಗಳು, ಶೋಧಕಗಳು ಮತ್ತಿತರ ರೊಚ್ಚಿನಿಂದ ಕಲ್ಮಶಗಳನ್ನು ತೆಗೆದು ಹಾಕಲು ಬಳಕೆ ಮಾಡುವಂತಹ ಸಂಸ್ಕರಣಾ ವಸ್ತುಗಳ ಸರಣಿಯನ್ನೇ ಹೊಂದಿರುವಂತಹ ಪ್ರಾಧೀಕೃತ ತ್ಯಾಜ್ಯ ಸಂಸ್ಕರಣಾ ಸ್ಥಾವರ.

(xxxvii)**ಒಳಚರಂಡಿ'** ಎಂದರೆ ವಾಸದ ಮನೆಗಳ ಮತ್ತು ಇತರ ತ್ಯಾಜ್ಯಗಳನ್ನು ಹಾಗೂ ಹರಿವ ನೀರನ್ನು ಸಂಗ್ರಹಿಸಲು ಬಳಕೆ ಮಾಡುವಂತಹ ಕೊಳವೆಗಳ ಒಂದು ವ್ಯವಸ್ಥೆ.

(xxxviii)**'ರೊಚ್ಚು'**ಎಂದರೆ ಅರೆ ಘನ ರೂಪದಲ್ಲಿ ಸಂಗ್ರಹಿತವಾಗಿರುವ ಜಲಮಿಶ್ರಿತ ಘನ ವಸ್ತುಗಳು ಮತ್ತು ರೊಚ್ಚು ತೊಟ್ಟಿಗಳು ಮತ್ತು ಕೊಳದ ಅಡಿಯಲ್ಲಿ ಸಂಗ್ರಹವಾಗಿರುವಂತಹ ನೀರನ್ನೂ ಒಳಗೊಂಡ ಘನರೂಪಿ ವಸ್ತುಗಳು.

(xxxix)'**ನೆನೆಸುವ ಗುಂಡಿಗಳು ಅಥವಾ ಇಂಗುಗುಂಡಿಗಳು(ಹೊಂಡ)** ಎಂದರೆ ನೀರನ್ನು ಹರಿಸುವ ಅಥವಾ ಸುತ್ತಲಿನ ಮಣ್ಣಿನಲ್ಲಿ ಇಂಗಿಸುವ ಅಥವಾ ರಂಧ್ರಗಳಿಂಂದ ಆವೃತ್ತವಾಗಿರುವ ತೊಟ್ಟಿಯು ತ್ಯಾಜ್ಯ ನೀರನ್ನು ಭೂಮಿಯಲ್ಲಿ ಹಿಂಗಲು ಅನುವು ಮಾಡಿಕೊಡುವಂತಹ ಹೊಂಡ.

(xi.)**'ಮೂಲ'** ಎಂದರೆ ದ್ರವ ತ್ಯಾಜ್ಯವು ಉತ್ಪತ್ತಿಯಾಗುವ ಆವರಣ.

(xii)''**ನೀರಿನ ಹರಿವು** ಎಂದರೆ ನೆಲಮಟ್ಟದ ನೀರನ್ನು ಮತ್ತು/ಅಥವಾ ಸಾರ್ವಜನಿಕರಿಗಾಗಿ ಹರಿವ ನೀರನ್ನು ಕೊಳವೆಗಳು ಅಥವಾ ಕಾಲುವೆ ವ್ಯವಸ್ಥೆಯ ಮೂಲಕ ಹರಿಸುವ ವ್ಯವಸ್ಥೆ, ಆದರೆ ಅದು ಕೊಳಚೆ ನೀರು ಹರಿವ ವ್ಯವಸ್ಥೆಗೆ ಸಂಪರ್ಕ ಕಲ್ಪಿಸುವುದಿಲ್ಲ.

(xiii)**'ಸಾಗಾಣಿಕೆ'** ಎಂದರೆ ಸಂಸ್ಕರಿಸಲಾದ ಅಥವಾ ಭಾಗಶಃ ಸಂಸ್ಕರಿಸಲಾದ ಅಥವಾ ಸಂಸ್ಕರಿಸಲಾರದ ತ್ಯಾಜ್ಯವನ್ನು ಯಾವುದೇ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪರಿಸರಾತ್ಮಕವಾಗಿ ಉತ್ತಮ ವಿಧಾನದಲ್ಲಿ ವಿಶೇಷವಾಗಿ ವಿನ್ಯಾಸಗೊಂಡಿರುವ ಮತ್ತು ಮುಚ್ಚಲ್ಪಟ್ಟಿರುವ ಸಾಗಾಣಿಕೆ ವ್ಯವಸ್ಥೆಯ ಮೂಲಕ(ವಾಹನದ ಮೂಲಕ) ದುರ್ವಾಸನೆ, ಸುರಿಯುವಿಕೆ ಮತ್ತು ಅಸಹ್ಯ ಪರಿಸ್ಥಿತಿಯನ್ನು ನಿರ್ಬಂಧಿಸುವ ಸಲುವಾಗಿ ತ್ಯಾಜ್ಯದ ಸಾಗಾಣಿಕೆಗೆ ಬಳಕೆ ಮಾಡಲಾಗುವ ವಾಹನಗಳು.

(xiiii)**'ಸಂಸ್ಕರಣೆ'** ಎಂದರೆ ಯಾವುದೇ ತ್ಯಾಜ್ಯದ ಭೌತಿಕ, ರಾಸಾಯನಿಕ ಅಥವಾ ಜೈವಿಕ ಗುಣ ಲಕ್ಷಣಗಳನ್ನು ಮಾರ್ಪಡಿಸುವ ರೀತಿಯಲ್ಲಿ ಅದು ಅಪಾಯವನ್ನು ಸೃಜಿಸುವ ಶಕ್ತಿಯನ್ನು ಇಳಿಕೆ ಮಾಡುವ ಸಲುವಾಗಿ ವಿನ್ಯಾಸಗೊಳಿಸಲಾಗಿರುವ ವಿಧಾನ, ತಂತ್ರ ಅಥವಾ ಪ್ರಕ್ರಿಯೆ

(xiiv)**'ಬಳಕೆದಾರರ ಶುಲ್ಕ' ಎಂದರೆ** ಗ್ರಾಮ ಪಂಚಾಯತಿಯಿಂದ ದ್ರವ ತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಪೂರ್ಣ ಅಥವಾ ಭಾಗಶಃ ವೆಚ್ಚವನ್ನು ವ್ಯಾಪ್ತಗೊಳಿಸಿ ಉತ್ಪಾದಕರ ಮೇಲೆ ಗ್ರಾಮ ಪಂಚಾಯಿತಿ ಮತ್ತು/ಅಥವಾ ಗ್ರಾಮ ಪಂಚಾಯತಿಯಿಂದ ಪ್ರಾಧೀಕರಿಸಲ್ಪಟ್ಟಿರುವ ಏಜೆನ್ಸಿಯು ಈ ಉಪವಿಧಿಗಳನ್ವಯ ವಿಧಿಸುವಂತಹ ಶುಲ್ಕ.

# ಅಧ್ಯಾಯ – II

## ಮಾನವ ತ್ಯಾಜ್ಯ ರೊಚ್ಚು ಮತ್ತು ರೊಚ್ಚು ನಿರ್ವಹಣೆ–ನಿಯಂತ್ರಣ, ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿ

### 2. ಶೌಚಾಲಯಗಳ ನಿರ್ಮಾಣ ಮತ್ತು ಮರುಮಾರ್ಪಾಡು

ಎ. ಸ್ವಚ್ಛ ಭಾರತ ಅಭಿಯಾನ(ಗ್ರಾಮೀಣ) ಮಾರ್ಗಸೂಚಿಗಳನ್ವಯ ಬಯಲು ಶೌಚಾಲಯಗಳಿಂದ ಮುಕ್ತಗೊಳಿಸುವ ಸಲುವಾಗಿ ತನ್ನ ಕಾರ್ಯವ್ಯಾಪ್ತಿಯಲ್ಲಿ ಪ್ರತಿಯೊಂದು ವಾಸದ ಮನೆಗೂ ಸಹ ಶೌಚಾಲಯಗಳ ನಿರ್ಮಾಣ ಮತ್ತು ಅದು ಪ್ರತಿಯೊಂದು ಮನೆಗೂ ನಿಲುಕುವುದನ್ನು ಖಾತ್ರಿ ಪಡಿಸುವುದು ಗ್ರಾಮ ಪಂಚಾಯತಿಯ ಹೊಣೆಗಾರಿಕೆಯಾಗಿರತಕ್ಕದ್ದು.

ಬಿ. ಗ್ರಾಮ ಪಂಚಾಯತಿಯು–

i. ಪ್ರತಿಯೊಬ್ಬ ಗ್ರಾಮ ನಿವಾಸಿಯೂ ಸಹ ತಾಂತ್ರಿಕ ಮಾರ್ಗಸೂಚಿಯನ್ವಯ ಅಥವಾ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಕಾಲಕಾಲಕ್ಕೆ ಇತರ ಸಕ್ಷಮ ಪ್ರಾಧಿಕಾರಗಳು ನಿರ್ದಿಷ್ಟ ಪಡಿಸಿದ ಗುಣಮಟ್ಟದ ವಿನ್ಯಾಸದನ್ವಯ ವೈಜ್ಞಾನಿಕವಾಗಿ ವಿನ್ಯಾಸಗೊಳಿಸಿದ ಶೌಚಾಲಯಗಳನ್ನು ನಿಲುಕುವಂತೆ ಖಾತ್ರಿ ಪಡಿಸತಕ್ಕದ್ದು.

ii. ಸಮುದಾಯ ಯೋಜನೆಯ ಮತ್ತು ನಿರ್ವಹಣೆಯ ಶೌಚಾಲಯಗಳನ್ನು ಅಗತ್ಯವಿದ್ದ ಸಂದರ್ಭಗಳಲ್ಲಿ ಸ್ಥಳಾಭಾವ, ಕಾಲಾವಧಿ ಅಥವಾ ಆರ್ಥಿಕ ಅಡಚಣೆಯಿಂದಾಗಿ ವೈಯಕ್ತಿಕ ಶೌಚಾಲಯಗಳನ್ನು ಹೊಂದಲು ಅವಕಾಶವಿರದ ವಾಸದ ಮನೆಗಳ ನಿವಾಸಿಗಳಿಗಾಗಿ ಸಾಮೂಹಿಕ ಬಳಕೆಗಾಗಿ ನಿರ್ಮಾಣ ಮಾಡುವುದನ್ನು ಮತ್ತು ನಿಲುಕುವುದನ್ನು ಖಾತ್ರಿ ಪಡಿಸತಕ್ಕದ್ದು.

iii ಶೌಚಾಲಯಗಳ ನಿರ್ಮಾಣಕ್ಕೆ ಸಾಕಷ್ಟು ಸ್ಥಳಾವಕಾಶವಿರದಿರುವಂತಹ ನಿವಾಸಿಗಳಿಗೆ 500 ಮೀಟರುಗಳ ದೂರದ ವ್ಯಾಪ್ತಿಯಲ್ಲಿ ಶೌಚಾಲಯಗಳು ನಿಲುಕುವುದನ್ನು ಖಾತ್ರಿ ಪಡಿಸತಕ್ಕದ್ದು.

iv ಈ ಉಪವಿಧಿಗಳ ಅನುಸೂಚಿ IVರಲ್ಲಿ ಉಪಬಂಧಿಸಿರುವಂತಹ ಮಾದರಿ ನಮೂನೆಯ ಆಧಾರದ ಮೇಲೆ ಅಶುಚಿತ್ವದಿಂದ ಕೂಡಿದ ಶೌಚಾಲಯಗಳನ್ನು ಗುರುತಿಸುವ ಸಲುವಾಗಿ, ಮತ್ತು ಅವುಗಳನ್ನು ವಿನ್ಯಾಸ ಹಾಗೂ ಗುರುತಿಸಲಾದ ದೋಷಗಳ ಆಧಾರದ ಮೇಲೆ ವರ್ಗೀಕರಿಸುವ ಸಲುವಾಗಿ ವಾರ್ಷಿಕ ಸರ್ವೆ ಕಾರ್ಯವನ್ನು ಕೈಗೊಳ್ಳತಕ್ಕದ್ದು.

v. ಅಶುಚಿತ್ವದಿಂದ ಕೂಡಿದ ಶೌಚಾಲಯಗಳನ್ನು ಮರುಮಾರ್ಪಾಡು ಮಾಡಲು ಮತ್ತು ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸಹಾಯಧನ/ಪ್ರೋತ್ಸಾಹಕಗಳನ್ನು ನೀಡಲು ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸತಕ್ಕದ್ದು ಮತ್ತು ಹಣಕಾಸಿನ ಮೂಲವನ್ನು ಗುರುತಿಸತಕ್ಕದ್ದು.

vi ಪ್ರತಿಯೊಂದು ಅಶುಚಿಯಾದ ಶೌಚಾಲಯಗಳನ್ನು ಮಾಲೀಕನಿಂದಲೇ ಆತನ ಸ್ವಂತ ವೆಚ್ಚದಲ್ಲಿಯಾಗಲೀ ಮತ್ತು/ಅಥವಾ ಗ್ರಾಮ ಪಂಚಾಯತಿಯಿಂದ ನೀಡಲಾಗುವ ಸಹಾಯಧನದ ಮೂಲಕವಾಗಲೀ ಈ ಉಪವಿಧಿಗಳು ಜಾರಿಗೆ ಬಂದ ಮೂರು ವರ್ಷಗಳೊಳಗೆ ಮರುಮಾರ್ಪಡಿಸುವಿಕೆ ಅಥವಾ ಮರು ನಿರ್ಮಾಣ ಮಾಡುವುದನ್ನು ಖಚಿತ ಪಡಿಸತಕ್ಕದ್ದು.

ಸಿ. **ಅನುಮೋದನೆಗಳು–** ನೂತನ ನಿಯಂತ್ರಣಾ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ, ಎಲ್ಲಾ ಮಾಲೀಕರುಗಳೂ ಸಹ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಬಿಡುಗಡೆ ಮಾಡಿರುವ ಮಾರ್ಗಸೂಚಿಯನ್ನು ಪಾಲನೆ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಗ್ರಾಮ ಪಂಚಾಯತಿಯ ಅನುಮೋದನೆಯನ್ನು ಪಡೆಯತಕ್ಕದ್ದು.

ಡಿ. ಒಂದು ವೇಳೆ ನಿಯಂತ್ರಣಾ ವ್ಯವಸ್ಥೆಯು ಸಾಕಷ್ಟಿರದಿದ್ದಲ್ಲಿ, ಗ್ರಾಮ ಪಂಚಾಯಿತಿಗಳಾಗಲೀ ಅಥವಾ ಅದರಿಂದ ಪದನಾಮಿತನಾದ ಅಧಿಕಾರಿಯಾಗಲೀ ಅಂತಹ ಉತ್ಪಾದಕನು ಅಥವಾ ಅಂತಹ ಸಾಕಾಗದಂತಹ ನಿಯಂತ್ರಣ ವ್ಯವಸ್ಥೆಯನ್ನು ಬಳಕೆ ಮಾಡುತ್ತಿರುವ ವ್ಯಕ್ತಿಗೆ ಗ್ರಾಮ ಪಂಚಾಯತಿಯಿಂದ ನಿರ್ಣಯಿಸಲಾದ ದಿನಾಂಕದೊಳಗೆ ಅಸಮರ್ಪಕ ನಿಯಂತ್ರಣ ವ್ಯವಸ್ಥೆಯ ಮಾರ್ಪಾಡು ಅಥವಾ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ದೇಶಿಸಿ ನೋಟೀಸನ್ನು ಗ್ರಾಮ ಪಂಚಾಯತಿಯಿಂದ ಜಾರಿ ಮಾಡತಕ್ಕದ್ದು.

## 3. ಉತ್ಪಾದಕರಿಂದ ಮಾನವ ತ್ಯಾಜ್ಯ ರೊಜ್ಜಿನ ನಿಯಂತ್ರಣ

ಎ. ಸ್ಥಳದ ಹಿನ್ನೀರು ನಿಯಂತ್ರಣಾ ವ್ಯವಸ್ಥೆಗಳ ನಿಯಂತ್ರವು ಆವರಣದ ಮಾಲೀಕನ ಹೊಣೆಗಾರಿಕೆಯಾಗಿರತಕ್ಕದ್ದು.

ಬಿ. ಎಲ್ಲಾ ಮಾಲೀಕರುಗಳೂ ಸಹ ಯುಕ್ತ ನಿಯಂತ್ರಣಾ ವ್ಯವಸ್ಥೆಯನ್ನು ಸ್ಥಳೀಯ ಪರಿಸ್ಥಿತಿಯ ಮತ್ತು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಇನ್ನಿತರ ಸಕ್ಷಮ ಪ್ರಾಧಿಕಾರಗಳು ಹೊರಡಿಸಿರುವ ಮಾರ್ಗಸೂಚಿಗಳ ಆಧಾರದ ಮೇಲೆ ನಿರ್ಮಾಣ ಮಾಡತಕ್ಕದ್ದು

ಸಿ. ನಿಯಂತ್ರಣಾ ವ್ಯವಸ್ಥೆಯನ್ನು ಯಾವುದೇ ಮಣ್ಣಿನ ಮೇಲ್ಮೈ, ಅಂತರ್ಜಲ ಅಥವಾ ಮೇಲ್ಮೈ ಜಲವು ಕಲುಷಿತವಾಗದಂತೆ ವಿನ್ಯಾಸಗೊಳಿಸಿ ನಿರ್ಮಾಣ ಮಾಡುವುದನ್ನು ಖಾತ್ರಿ ಪಡಿಸತಕ್ಕದ್ದು ಮತ್ತು ಅವುಗಳು ನೊಣಗಳು ಅಥವಾ ಜಾನುವಾರುಗಳಿಗೆ ನಿಲುಕತಕ್ಕಂತಿರತಕ್ಕದ್ದಲ್ಲ.

ಡಿ. ಅಂತಹ ಎಲ್ಲಾ ನಿರ್ಮಾಣಗಳೂ ಸಹ, ಈ ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿದಂತೆ, ಶೌಚಾಲಯ ನಿರ್ಮಾಣದಲ್ಲಿ ತರಬೇತಿಯನ್ನು ಹೊಂದಿದ ಮೇಸ್ತ್ರಿಗಳೇ ನಿರ್ಮಾಣ ಮಾಡತಕ್ಕದ್ದು.

## 4. ನಿಯಂತ್ರಣಾ ವ್ಯವಸ್ಥೆಯ ರೊಚ್ಚು ತೆಗೆಯುವಿಕೆ

ಎ. ಯಾರೇ ಉತ್ಪಾದಕನು ದ್ರವ ತ್ಯಾಜ್ಯವನ್ನುಅಥವಾ ಹೊರಸೂಸುವಿಕೆಯನ್ನು ಹರಿವ ನೀರಿನ ಕೊಳವೆಗಳು, ಜಲಮೂಲಗಳು (Water bodies), ಜಲಮಾರ್ಗಗಳು, ಮುಕ್ತ ಪ್ರದೇಶಗಳು, ಕೃಷಿ ಭೂಮಿಗಳು ಅಥವಾ ಇನ್ನಿತರ ಸಾರ್ವಜನಿಕ ಪ್ರದೇಶಗಳಲ್ಲಿ ವಿಲೇವಾರಿ ಮಾಡತಕ್ಕದ್ದಲ್ಲ ಅಥವಾ ಹರಿಸತಕ್ಕದ್ದಲ್ಲ.

ಬಿ ಉತ್ಪಾದಕನು ಯಾವುದೇ ಮಾನವ ಸ್ವಚ್ಛಗಾರರನ್ನು ಆತನ ಅಥವಾ ಆಕೆಯ ಆವರಣದ ಸ್ಥಳದಲ್ಲಿನ ನಿಯಂತ್ರಣಾ ವ್ಯವಸ್ಥೆಗಳನ್ನು ತೆರವುಗೊಳಿಸಲು ನೇಮಿಸತಕ್ಕದ್ದಲ್ಲ. ಸದರಿ ನಿಯಂತ್ರಣಾ ವ್ಯವಸ್ಥೆಯ ತೆರವುಗೊಳಿಸುವಿಕೆಯನ್ನು ಮಾನವ ಸ್ವಚ್ಛಗಾರರ ನೇಮಕ ನಿರ್ಬಂಧ ಮತ್ತು ಅವರ ಪುನರ್ವಸತಿ ಅಧಿನಿಯಮ, 2013ರ ಉಪಬಂಧಗಳನ್ನು ಎಲ್ಲಾ ಸಂದರ್ಭಗಳಲ್ಲಿಯೂ ಸಹ ಪಾಲನೆ ಮಾಡತಕ್ಕದ್ದು.

ಸಿ. ಮಾನವ ತ್ಯಾಜ್ಯ ರೊಚ್ಚಿನ ತೆರವುಗೊಳಿಸುವಿಕೆ ಮತ್ತು ಸಾಗಾಣಿಕೆಯನ್ನು ಎಫ್‌ಎಸ್‌ಟಿಪಿ ಮತ್ತು ಮುಚ್ಚಿದ ಸುರಕ್ಷಿತ ನಿರ್ವಹಣಾ ವ್ಯವಸ್ಥೆಯಲ್ಲಿ ಮಾತ್ರ ಗ್ರಾಮ ಪಂಚಾಯತಿಯಿಂದ ಪರವಾನಗಿಯನ್ನು ಪಡೆದಿರುವ ಏಜೆನ್ಸಿ ಅಥವಾ ಗ್ರಾಮಪಂಚಾಯತಿಯ ವತಿಯಿಂದಲೇ ಕೈಗೊಳ್ಳತಕ್ಕದ್ದು.

ಡಿ. ಯಾವುದೇ ಮಾನವ ಮಧ್ಯಪ್ರವೇಶರಹಿತವಾಗಿ ನಿಯಂತ್ರಣಾ ವ್ಯವಸ್ಥೆಯ ತೆರವುಗೊಳಿಸುವಿಕೆಯನ್ನು ಕೈ ಗೊಳ್ಳತಕ್ಕದ್ದು ಮತ್ತು ಕೇವಲ ಯಾಂತ್ರಿಕ ಉಪಕರಣಗಳ ಬಳಕೆಯಿಂದ ಮಾತ್ರ ಎಂದರೆ ನಿರ್ವಾತ ಟ್ಯಾಂಕರುಗಳು ಮತ್ತು ಬಿಡುಗಡೆ ವಾಲ್ವುಗಳನ್ನೊಳಗೊಂಡ ರೊಚ್ಚು ಕೊಳವೆಗಳ ಮೂಲಕವೇ ರೊಚ್ಚನ್ನು ತೆರವುಗೊಳಿಸತಕ್ಕದ್ದು.

ಇ ನಿಯಂತ್ರಣಾ ವ್ಯವಸ್ಥೆಯ ತೆರವುಗೊಳಿಸುವ ಪ್ರಕ್ರಿಯೆಯನ್ನು ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಗಳ ಮಂತ್ರಾಲಯವು ನವೆಂಬರ್ 2018ರಲ್ಲಿ ಬಿಡುಗಡೆ ಮಾಡಿರುವ 'ರೊಚ್ಚು ಹರವು ಮತ್ತು ರೊಚ್ಚು ತೊಟ್ಟಿಗಳನ್ನು ಸ್ವಚ್ಛಗೊಳಿಸುವ ಗುಣಮಟ್ಟದ ಚಾಲನಾ ವಿಧಾನ (Standard Operationg Procedure for Cleaning Sewers and Septic Tanks) ನಲ್ಲಿ ನಮೂದಿಸಿರುವ ಸುರಕ್ಷಿತ ಎಚ್ಚರಿಕಾ ಕ್ರಮಗಳನ್ನು ಪಾಲಿಸಿಯೇ ಕೈಗೊಳ್ಳತಕ್ಕದ್ದು.

ಎಫ್. ನಿಯಂತ್ರಣಾ ವ್ಯವಸ್ಥೆಯ ಸಾಮರ್ಥ್ಯದ ಆಧಾರದ ಮೇಲೆ, ಮತ್ತು ಉತ್ಪಾದನೆಯಾದ ರೊಚ್ಚಿನ ಪ್ರಮಾಣದ ಆಧಾರದ ಮೇಲೆ ನಿಯತಕಾಲಿಕವಾಗಿ ರೊಚ್ಚು ತರವುಗೊಳಿಸತಕ್ಕದ್ದು.

ಜಿ ಅವಳಿ ಗುಂಡಿಗಳ ಶೌಚಾಲಯಗಳಿಗೆ ಸಂಬಂಧಿಸಿದಂತೆ, ಭರ್ತಿಯಾದ ಹೊಂಡವನ್ನು ತೆರವುಗೊಳಿಸುವ ಪ್ರಕ್ರಿಯೆಯನ್ನು ಕನಿಷ್ಟ ಎರಡು ವರ್ಷಗಳ ಕಾಲ ರೊಚ್ಚು ಘನೀಕೃತವಾದ ತರುವಾಯವೇ ಮತ್ತು ಅದು ಜಡವಾದ(ಪೂರ್ಣವಾಗಿ ಸಾವಯವವಾದ ನಂತರ) ಮಾಡತಕ್ಕದ್ದು.

ಎಚ್.ಗ್ರಾಮ ಪಂಚಾಯತಿಯು ಅದರ ವ್ಯಾಪ್ತಿಯಲ್ಲಿನ ನಿರ್ಮಾಣ ದಿನಾಂಕಗಳನ್ನು ಮತ್ತು ಎಲ್ಲಾ ತ್ಯಾಜ್ಯೋತ್ಪಾದಕರುಗಳ ರೊಚ್ಚು ತೆರವುಗೊಳಿಸುವ ದಿನಾಂಕಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಗ್ರಾಮ ಪಂಚಾಯತಿಗಳು ಆವರಣಗಳ ಮಾಲೀಕರುಗಳಿಗೆ ವಿವಿಧ ಮಾದರಿಯ ನಿಯಂತ್ರಣಾ ವ್ಯವಸ್ಥೆಗಳಿಗೆ

ನಿರ್ದಿಷ್ಟ ಪಡಿಸಿದ ನಿಯತಕಾಲಿಕದ ಆಧಾರದ ಮೇಲೆ ರೊಚ್ಚು ತೆರವುಗೊಳಿಸಲು ನೆನಪೋಲೆಗಳನ್ನು ಕಳುಹಿಸತಕ್ಕದ್ದು.

(ಐ) ಗ್ರಾಮ ಪಂಚಾಯತಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಸ್ವಯಂ ತಾನೇ ರೊಚ್ಚು ತೆರವುಗೊಳಿಸುವ ಅಥವಾ ಏಜೆನ್ಸಿಯ ಪರಿಶ್ರಮ, ಚಾಲನೆ, ಸಾಮರ್ಥ್ಯ ಮತ್ತು ಶಕ್ತಿಗಳನ್ನು ತಪಾಸಣೆ ಮಾಡಿದ ನಂತರ ಪರವಾನಗಿಯನ್ನು ಹೊಂದಿದ ಏಜೆನ್ಸಿಯ ಮೂಲಕ ರೊಚ್ಚು ತೆರವುಗೊಳಿಸುವ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.

## 5. ನಿಯಂತ್ರಣಾ ವ್ಯವಸ್ಥೆಗಳಿಂದ ಮಾನವ ತ್ಯಾಜ್ಯ ರೊಚ್ಚಿನ ಸಾಗಾಣಿಕೆ

ಎ. ನಿಯಂತ್ರಣಾ ವ್ಯವಸ್ಥೆಗಳಿಂದ ಮಾನವ ತ್ಯಾಜ್ಯ ರೊಚ್ಚನ್ನು ಸ್ವಯಂ ತಾನೇ ಆಗಲೀ ಅಥವಾ ಲೈಸೆನ್ಸು ಹೊಂದಿದ ಏಜೆನ್ಸಿಯ ಮೂಲಕವಾಗಲೀ ತೆರವುಗೊಳಿಸುವ ಮತ್ತು ಸಾಗಾಣಿಕೆಯು ಗ್ರಾಮಪಂಚಾಯತಿಯ ಹೊಣೆಗಾರಿಕೆಯಾಗಿರತಕ್ಕದ್ದು.

ಬಿ. ಗ್ರಾಮ ಪಂಚಾಯತಿಯು ಮಾನವ ತ್ಯಾಜ್ಯ ರೊಚ್ಚನ್ನು ತೆರವುಗೊಳಿಸಲು ಮತ್ತು ಸಾಗಾಣಿಕೆ ಮಾಡಲು ಕೆಳಕಂಡ ಯಾವುದಾದರೊಂದು ವಿಧಾನವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

i. ರೊಚ್ಚು ತೆರವುಗೊಳಿಸುವ ಸೇವೆಯನ್ನು ಒದಗಿಸಲು ಅಗತ್ಯವಿರುವ ಉಪಕರಣಗಳು/ವಾಹನಗಳನ್ನು ಹೊಂದಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

ii. ತಾಲ್ಲೂಕು ಮಟ್ಟದಲ್ಲಿ ಲಭ್ಯವಿರುವಂತಹ ತೆರವುಗೊಳಿಸುವ ವಾಹನದ ಸೇವೆಯನ್ನು ಬಳಕೆ ಮಾಡತಕ್ಕದ್ದು.

iii. ತೆರವುಗೊಳಿಸುವ ಸೇವೆಯನ್ನು ಒದಗಿಸುವ ಸಲುವಾಗಿ ಏಜೆನ್ಸಿನ್ನು ಪ್ರಾಧೀಕರಿಸತಕ್ಕದ್ದು.

ಸಿ. ಗ್ರಾಮ ಪಂಚಾಯತಿಯು ಸ್ವಯಂ ತಾನೇ ಆಗಲೀ ಅಥವಾ ಲೈಸೆನ್ಸು ಹೊಂದಿದ ಏಜೆನ್ಸಿಯಿಂದ ಸ್ಥಳದಲ್ಲಿನ ನೈರ್ಮಲ್ಯ ನಿಯಂತ್ರಣಾ ವ್ಯವಸ್ಥೆಗಳ ರೊಚ್ಚು ತೆರವುಗೊಳಿಸುವ ಮತ್ತು ಯುಕ್ತ ತೆರವುಗೊಳಿಸುವ ವಾಹನಗಳ ಮೂಲಕ ಸಾಗಾಣಿಕೆ ಮಾಡುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು. ವಾಹನದ ಆಯ್ಕೆಯನ್ನು ನಿಯಂತ್ರಣಾ ವ್ಯವಸ್ಥೆಯ ನಿಲುಕುವಿಕೆ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಮಾಡತಕ್ಕದ್ದು.

ಡಿ. ಗ್ರಾಮ ಪಂಚಾಯತಿಯು ಕೆಳಕಂಡ ಅಂಶಗಳನ್ನು ಖಚಿತ ಪಡಿಸುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು.

i. ಮಾನವ ತ್ಯಾಜ್ಯದ ರೊಚ್ಚನ್ನು ಸಾಗಾಣಿಕೆ ಮಾಡಲು ಬಳಕೆ ಮಾಡಲಾಗುವ ವಾಹನವು ಅದರಲ್ಲಿ ಸಂಗ್ರಹಿಸಲಾಗಿರುವಂತಹ ಮಾನವ ತ್ಯಾಜ್ಯ ರೊಚ್ಚು ಪರಿಸರಕ್ಕೆ ತೆರೆದುಕೊಳ್ಳಲಾಗದಂತೆ ಮುಚ್ಚಿರತಕ್ಕದ್ದು.

ii. ದ್ರವ ಹರಿವು ಅಥವಾ ಮಾನವ ತ್ಯಾಜ್ಯ ರೊಚ್ಚು ಅಥವಾ ಇತರ ಯಾವುದೇ ಅಂಶವನ್ನು ಸ್ಥಳದ ನಿಯಂತ್ರಣಾ ವ್ಯವಸ್ಥೆಗಳಿಂದ ತೆರವುಗೊಳಿಸುವಲ್ಲಿ ಅದನ್ನು ಮುಕ್ತ ಮೈದಾನಗಳಲ್ಲಿ, ಜಲಮೂಲಗಳು, ಕೃಷಿ ಭೂಮಿಗಳು ಅಥವಾ ಇತರ ಯಾವುದೇ ಸಾರ್ವಜನಿಕ ಸ್ಥಳಗಳಿಗೆ ಬಿಡುವುದರ ಮೂಲಕ ವಿಲೇವಾರಿ ಮಾಡತಕ್ಕದ್ದಲ್ಲ. ಮತ್ತು ಅವುಗಳನ್ನು ಗ್ರಾಮ ಪಂಚಾಯತಿಯ ಪ್ರಾಧೀಕೃತ ರೊಚ್ಚು ಸಂಸ್ಕರಣಾ ಸೌಲಭ್ಯಗಳಲ್ಲಿ ಬಟವಾಡೆ ಮಾಡಿ ವಿಲೇವಾರಿ ಮಾಡತಕ್ಕದ್ದು.

ಇ. ಒಂದು ವೇಳೆ ಗ್ರಾಮ ಪಂಚಾಯತಿಯು ಭಾಗಶಃ ಒಳಚರಂಡಿ ವ್ಯವಸ್ಥೆಯಿರುವ ಮತ್ತು ಸಮೀಪದಲ್ಲಿಯೇ ಎಸ್‌ಟಿಪಿ ಸೌಲಭ್ಯವು ಲಭ್ಯವಿರುವ ಜಾಲದ ಸಮೀಪವಿದ್ದಲ್ಲಿ, ಕಪ್ಪು ಹಾಗೂ ಕಂದು ಬಣ್ಣದ ಉಭಯ ಜಲದ ಹರಿವನ್ನೂ ಸಹ ಅಂತರ್ಜಲ ಸಂಯೋಜನೆಯೊಂದಿಗೆ ಸೇರ್ಪಡೆ ಮಾಡಬಹುದು.

## 7. ಮಾನವ ತ್ಯಾಜ್ಯ ರೊಚ್ಚಿನ ಸಂಸ್ಕರಣೆ ಮತ್ತು ವಿಲೇವಾರಿ

ಎ. ಮಾನವ ತ್ಯಾಜ್ಯ ರೊಚ್ಚು ಹಾಗೂ ಇತರ ರೊಚ್ಚನ್ನು ಸಂಸ್ಕರಿಸುವ ಮತ್ತು ವಿಲೇವಾರಿ ಮಾಡುವುದು ಗ್ರಾಮ ಪಂಚಾಯಿತಿಯ ಹೊಣೆಗಾರಿಕೆಯಾಗಿರತಕ್ಕದ್ದು ಮತ್ತು ಅದನ್ನು ಕೆಳಕಂಡ ವಿಧಾನದಲ್ಲಿ ಮಾಡಬಹುದು

i. ಅತೀ ಸಮೀಪದಲ್ಲಿರುವ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಅಂತಹ ಅಸ್ತಿತ್ವದಲ್ಲಿರುವ ಎಸ್‌ಟಿಪಿಯಲ್ಲಿ–

A. ಉತ್ಪಾದನೆಯ ಮಾನವ ತ್ಯಾಜ್ಯ ರೊಚ್ಚು ಅಥವಾ ಇತರ ರೊಚ್ಚು ಉತ್ಪಾದನೆಯಾಗುವ ಮೂಲದ 10 ಕಿ.ಮಿ ವ್ಯಾಪ್ತಿ ಪ್ರದೇಶದೊಳಗಿರುವ ಎಸ್‌ಟಿಪಿಯಲ್ಲಿ; ಮತ್ತು

B ಗ್ರಾಮ ಪಂಚಾಯತಿಯಲ್ಲಿ ಉತ್ಪಾದನೆಯಾಗುವಂತಹ ಮಾನವ ತ್ಯಾಜ್ಯ ರೊಚ್ಚು ಅಥವಾ ಇತರ ರೊಚ್ಚನ್ನು ನಿರ್ವಹಿಸುವ ಸಾಮರ್ಥ್ಯವಿರುವಂತಹ ಎಸ್‌ಟಿಪಿ

C. ಗ್ರಾಮ ಪಂಚಾಯತಿಯು ಅಸ್ತಿತ್ವದಲ್ಲಿರುವ ಎಸ್‌ಟಿಪಿಯ ಪ್ರಸಕ್ತ ನಿರ್ವಹಣೆಯ ಮೂಲಕ ವಿವರವಾದ ನಿರ್ಧರಣೆ ಮತ್ತು ಯೋಜಿಸಿರುವ ಭವಿಷ್ಯದ ವಿಸ್ತರಣೆ, ಮತ್ತಿತರ ಮಾನದಂಡಗಳ ಆಧಾರದ ಮೇಲೆ ನಗರ ಸ್ಥಳೀಯ ಸಂಸ್ಥೆಯು ಎಸ್‌ಟಿಪಿಯೊಂದಿಗೆ ಜೋಡಣೆ ಮಾಡುವ ಪೂರ್ವದಲ್ಲಿ ನಗರ ಸ್ಥಳೀಯ ಸಂಸ್ಥೆಯೊಂದಿಗೆ, ವಿಷಯ ತಜ್ಞರು ಮತ್ತು ಗ್ರಾಮ ಜಲ ಮತ್ತು ನೈರ್ಮಲ್ಯ ಸಮಿತಿಯೊಂದಿಗೆ ಗ್ರಾಮ ಪಂಚಾಯತಿಯು ಸಮಾಲೋಚನೆಯನ್ನು ನಡೆಸತಕ್ಕದ್ದು. ನಿರ್ಧರಣೆಯನ್ನು ನಿಯತಕಾಲಿಕವಾಗಿ ಕೈಗೊಳ್ಳತಕ್ಕದ್ದು.

ii. ಒಂದು ವೇಳೆ ಅಸ್ತಿತ್ವದಲ್ಲಿರುವ ಎಫ್‌ಎಸ್‌ಟಿಪಿಯಲ್ಲಿ ಮಾನವ ತ್ಯಾಜ್ಯ ರೊಚ್ಚು ಮತ್ತು ರೊಚ್ಚುಗಳನ್ನು ಸಂಸ್ಕರಿಸಿ ವಿಲೇವಾರಿ ಮಾಡುವುದು ಕಾರ್ಯಸಾಧ್ಯವಲ್ಲದಿದ್ದಲ್ಲಿ, ಗ್ರಾಮ ಪಂಚಾಯತಿಗಳ ಸಮೂಹದಿಂದ ಪಾಲುದಾರಿಕೆ ಮಾಡಿಕೊಳ್ಳಬಹುದಾದಂತೆ ಮಾನವ ತ್ಯಾಜ್ಯ ರೊಚ್ಚು ಮತ್ತು ಇತರ ರೊಚ್ಚಿನ ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಎಫ್‌ಎಸ್‌ಟಿಪಿಯನ್ನು ನಿರ್ಮಾಣ ಮಾಡಬಹುದು, ಪರಂತು ಗ್ರಾಮಪಂಚಾಯತಿಯು ಸಾಧ್ಯವಾದ ಸ್ಥಳ, ಅಗತ್ಯವಿರುವ ಸಾಮರ್ಥ್ಯ, ಇತರ ಸಹಯೋಗಿ ಗ್ರಾಮಪಂಚಾಯತಿಗಳಿಂದ ಅದು ಇರಬಹುದಾದ ದೂರ ಕುರಿತಂತೆ ವಿವರವಾದ ನಿರ್ಣಯವನ್ನು ಕೈಗೊಂಡು ಮತ್ತು ನಿರ್ಮಾಣ ಮಾಡಬೇಕಾದ ಸ್ಥಳವನ್ನು ಅಂತಿಮಗೊಳಿಸುವ ಪೂರ್ವದಲ್ಲಿ ಮತ್ತು ಎಫ್‌ಎಸ್‌ಟಿಪಿಯ ನಿರ್ದಿಷ್ಟತೆಗಳನ್ನು ನಿರ್ಣಯಿಸುವ ಪೂರ್ವದಲ್ಲಿ ಅವುಗಳ ಪ್ರತಿನಿಧಿಗಳು, ವಿಷಯ ತಜ್ಞರು ಇವರುಗಳೊಂದಿಗೆ ಸಮಾಲೋಚನೆಯನ್ನು ಮಾಡತಕ್ಕದ್ದು. ಸ್ಥಿರ ಚಾಲನೆ ಮತ್ತು ನಿರ್ವಹಣೆಯನ್ನು ಖಾತ್ರಿ ಪಡಿಸುವ ನಿಟ್ಟಿನಲ್ಲಿ ವಿವರವಾದ ಆರ್ಥಿಕ ಯೋಜನೆಗಳನ್ನು ಲೆಕ್ಕ ಮಾಡತಕ್ಕದ್ದು .

ಬಿ. ಸಮೂಹ ಆಧಾರಿತ ಸಂಸ್ಕರಣಾ ಸ್ಥಾವರಗಳನ್ನು ತಾಲ್ಲೂಕು ಮಟ್ಟದ ನಿರ್ವಹಣಾಧಿಕಾರಿಗಳು ಯೋಜಿಸತಕ್ಕದ್ದು ಮತ್ತು ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು.

i. ಒಂದು ವೇಳೆ ಸಮೂಹ ಮಟ್ಟದಲ್ಲಿ ಮಾನವ ತ್ಯಾಜ್ಯ ರೊಚ್ಚಿನ ಸಹ–ಸಂಸ್ಕರಣೆಯು ಸಾಧ್ಯವಾಗದಿದ್ದಲ್ಲಿ, ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಗ್ರಾಮ ಪಂಚಾಯತಿಯು ಎಫ್‌ಎಸ್‌ಟಿಪಿಯನ್ನು ಸ್ಥಾಪಿಸಬಹುದು.

ii. ಸಂಸ್ಕರಣೆಯ ಪರಿಹಾರಕ್ಕಾಗಿ ತಂತ್ರಜ್ಞಾನದ ಆಯ್ಕೆಯು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಕಾಲಕಾಲಕ್ಕೆ ಹೊರಡಿಸಲಾದ ಮಾರ್ಗಸೂಚಿಗಳ ಆಧಾರದ ಮೇಲೆ ಇರತಕ್ಕದ್ದು.

ಸಿ. **ಅನುಮೋದನೆಗಳು–** ಗ್ರಾಮ ಪಂಚಾಯತಿಯು;

i. ಒಂದು ಎಸ್‌ಟಿಪಿ ಅಥವಾ ಎಫ್‌ಎಸ್‌ಟಿಪಿಯನ್ನು ಸ್ಥಾಪಿಸಲು ಪಡೆಯಬೇಕಾದ ಅನುಮೋದನೆಯನ್ನು ಪಡೆಯುವ ಸಲುವಾಗಿ ಸಲ್ಲಿಸಬೇಕಾದ ವಿವರಗಳನ್ನು ಕೆಳಕಂಡವುಗಳನ್ನು ಒಳಗೊಂಡಂತೆ ಆದರೆ ಪರಿಮಿತವಾಗಿರದಂತೆ ಅಧಿಸೂಚಿಸತಕ್ಕದ್ದು,

A.ತಾಂತ್ರಿಕ ರೇಖಾಚಿತ್ರ/ವಿನ್ಯಾಸ/ ಬಳಕೆ ಮಾಡಲಾದ ತಂತ್ರಜ್ಞಾನ ಮತ್ತು ಸಂಸ್ಕರಣೆ, ಮಾಲಿನ್ಯ ನಿಯಂತ್ರಣ ಕಾರ್ಯತಂತ್ರ (ಶಬ್ದಮಾಲಿನ್ಯದ ಇಳಿಕೆಯೂ ಸೇರಿದಂತೆ)ಸೋಂಕು ರಹಿತ ತಂತ್ರಜ್ಞಾನ(ಅಲ್ಟ್ರಾವೈಲೇಟ್ /ಕ್ಲೋರಿನೀಕರಣ) ಚರಂಡಿಗಳು ಅಥವಾ ನೈಸರ್ಗಿಕ ಜಲಮೂಲಗಳಿಗೆ ಹರಿವು

B. ಅಂದಾಜು ವಿದ್ಯುಚ್ಛಕ್ತಿ ಬಳಕೆ ಮತ್ತು ಅಗತ್ಯವಿರುವ ಜನರೇಟರ್‌ನ ಸಾಮರ್ಥ್ಯ

C. ತಾಂತ್ರಿಕ/ಮಾನವ ಶಕ್ತಿ ನಿರ್ವಹಣೆ ಮತ್ತು ಅಗತ್ಯವಿರುವ ಸಲಕರಣೆಗಳು

D. ಎಸ್‌ಟಿಪಿ ಅಥವಾ ಎಫ್‌ಎಸ್‌ಟಿಪಿ ತಂತ್ರಜ್ಞಾನವನ್ನು ಒದಗಿಸುವವರಿಂದ ಗ್ರಾಮ ಪಂಚಾಯತಿಯು ನಿಗದಿ ಪಡಿಸಿರುವಂತೆ ಚಾಲನಾ ಖಾತರಿ

ಡಿ. ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ಅಂತಹ ಎಸ್‌ಟಿಪಿ/ಎಫ್‌ಎಸ್‌ಟಿಪಿಗಳ ನಿರ್ಮಾಣ, ಚಾಲನೆ ಮತ್ತು ನಿರ್ವಹಣೆಯನ್ನು ನಿಯಂತ್ರಿಸುವ ಕುರಿತಂತೆ ಕಾಲಕಾಲಕ್ಕೆ ಹೊರಡಿಸಿರುವಂತಹ ಮಾರ್ಗಸೂಚಿಯ ಆಧಾರದ ಮೇಲೆ ಎಸ್‌ಟಿಪಿ/ಎಫ್‌ಎಸ್‌ಟಿಪಿಗಳನ್ನು ಸ್ಥಾಪಿಸುವ ಸಲುವಾಗಿ ಅನುಮೋದನೆಯನ್ನು ನೀಡುವುದು.

ಇ. ಎಫ್‌ಎಸ್‌ಟಿಪಿ/ಎಸ್‌ಟಿಪಿಗಳ ನಿರ್ಮಾಣ, ಚಾಲನೆ, ನಿರ್ವಹಣೆ, ಉಪಕರಣಗಳು, ಹೊರಹರಿವಿನ ಸಂಸ್ಕರಣೆಯು ಗುಣಮಟ್ಟ ಮತ್ತು ಪ್ರಮಾಣ, ವರದಿಗಳ ಮೇಲ್ವಿಚಾರಣೆ ಇವುಗಳ ನಿಯಮಿತ ತಪಾಸಣೆ, ಮತ್ತು ಅಂತಹ ತಪಾಸಣೆಯನ್ನು ಕೈಗೊಳ್ಳಲು ಗ್ರಾಮಪಂಚಾಯತಿಯ ವತಿಯಿಂದ ನೇಮಕ ಹೊಂದಿರುವ ಅಧಿಕಾರಿಯು ವಿಡಬ್ಲ್ಯೂಎಸ್‌ಸಿಯ ಪ್ರತಿನಿಧಿಯೊಂದಿಗೆ ಮತ್ತು ಇನ್ನಿತರ ವರದಿಗಳೊಂದಿಗೆ ಸಾರ್ವಜನಿಕರಿಗೆ ಲಭ್ಯನಾಗಿರತಕ್ಕದ್ದು.

ಎಫ್. ಗ್ರಾಮ ಪಂಚಾಯತಿಯ ಸಿಬ್ಬಂದಿಗಳು ಅಥವಾ ಗ್ರಾಮಪಂಚಾಯತಿಗಳಿಂದ ಪ್ರಾಧೀಕೃತವಾದ ಏಜೆನ್ಸಿಯ ಮೂಲಕ ಎಫ್‌ಎಸ್‌ಟಿಪಿ/ಎಸ್‌ಟಿಪಿಗಳಿಂದ ಸಿಪಿಸಿಬಿ.ಕೆಎಸ್‌ಪಿಸಿಬಿಗಳಿಂದ ನಿರ್ದಿಷ್ಟ ಪಡಿಸಿದ ಅಥವಾ ರಾಜ್ಯ ಸರ್ಕಾರದಿಂದ ಅಧಿಸೂಚಿಸಲಾಗಿರುವ ಹರಿವಿನ ಗುಣಮಟ್ಟದ ಪಾಲನೆಯನ್ನು ಖಾತ್ರಿ ಪಡಿಸುವ ಸಲುವಾಗಿ ಹೋಗುವ ಹೊರಹರಿವುಗಳ ನಿಯತಕಾಲಿಕ ಮೇಲ್ವಿಚಾರಣೆ.

ಜಿ. ಜಲ (ಮಾಲಿನ್ಯ ನಿರ್ಬಂಧ ಮತ್ತು ನಿಯಂತ್ರಣ) ಅಧಿನಿಯಮ, 1974ರರಡಿಯಲ್ಲಿ ಮತ್ತು ಇನ್ನಿತರ ಕಾಯಿದೆಗಳು ಮತ್ತು ವಿನಿಯಮಗಳಡಿಯಲ್ಲಿ ಇವುಗಳಲ್ಲಿ ಯಾವುದು ಅನ್ವಯವೋ ಅದರಡಿಯಲ್ಲಿ ಅನುಮತಿಗಳನ್ನು ನೀಡುವುದು.

ಎಚ್.ಎಲ್ಲಾ ತ್ಯಾಜ್ಯ ನಿರ್ವಾಹಕರುಗಳನ್ನು ಅವರುಗಳ ವೃತ್ತಿಯ ಸಂಬಂಧದ ವ್ಯತಿರಿಕ್ತ ಪರಿಣಾಮಗಳಿಂದ ಸಂರಕ್ಷಿಸುವುದು ಗ್ರಾಮಪಂಚಾಯತಿ ಅಥವಾ ಇತರ ಯಾವುದೇ ನಿರ್ದಿಷ್ಟ ಪಡಿಸಿದ ಪ್ರಾಧಿಕಾರದ ಹೊಣೆಗಾರಿಕೆಯಾಗಿರತಕ್ಕದ್ದು.

ಐ. ಮಾನವ ತ್ಯಾಜ್ಯ ರೊಚ್ಚಿನಿಂದ ಪಡೆದಂತಹ ಸಂಪನ್ಮೂಲಗಳ ಬಳಕೆ

i. ಅವಳಿ ಗುಂಡಿಗಳ ಶೌಚಾಲಯಗಳನ್ನು ಹೊಂದಿರುವ ಆವರಣದ ಮಾಲೀಕನು ಘನೀಕೃತವಾಗಿರುವ ರೊಚ್ಚನ್ನು ಮಣ್ಣಿನ ಸಾರವನ್ನು ಹೆಚ್ಚಿಸುವ ಸಾಧನವಾಗಿ ಮಾರಾಟ ಮಾಡಬಹುದು.

ii. ಎಫ್‌ಎಸ್‌ಟಿಪಿ ಅಥವಾ ಎಸ್‌ಟಿಪಿಯಿಂದ ಜೈವಿಕ ಘನವಸ್ತುಗಳು ಅಥವಾ ಕಾಂಪೋಸ್ಟನ್ನು ಗ್ರಾಮ ಪಂಚಾಯತಿಗಳು ಅಥವಾ ಎಫ್‌ಎಸಿಟಿಪಿಯನ್ನು ನಿರ್ವಹಿಸುತ್ತಿರುವ ಏಜೆನ್ಸಿಯು ಅದರ ಗುಣಮಟ್ಟವನ್ನು ಪರಿಶೀಲಿಸಿದ ತರುವಾಯ ಮಾರಾಟ ಮಾಡಬಹುದು.

iii.ಸಂಸ್ಕರಿಸಲಾದ ನೀರನ್ನು ಗ್ರಾಮ ಪಂಚಾಯತಿಯಾಗಲೀ ಅಥವಾ ಎಫ್‌ಎಸ್‌ಟಿಪಿ/ಎಸ್‌ಟಿಪಿಗಳಾಗಲೀ ಕೃಷಿ ಅಥವಾ ತೋಟಗಾರಿಕೆಯ ಉದ್ದೇಶಗಳಿಗಾಗಿ ಕೆಎಸ್‌ಪಿಸಿಬಿಯಿಂದ ನಿರ್ದಿಷ್ಟ ಪಡಿಸಲಾದ ಅನ್ವಯಿಕ ಸಂಸ್ಕರಿತ ಜಲ ಹರಿವು ತಪಾಸಣೆಗಳನ್ನು ಮಾಡಿದ ತರುವಾಯ ಮಾರಾಟ ಮಾಡಬಹುದು.

## ಅಧ್ಯಾಯ III

### ಬೂದು ನೀರು ಹಾಗೂ ಸಂಯೋಜಿತ ತ್ಯಾಜ್ಯ ನೀರು ನಿರ್ವಹಣೆ

### 8. ಬೂದು ನೀರಿನ ವಿಕೇಂದ್ರಿಕೃತ ನಿರ್ವಹಣೆ ಮತ್ತು ಸಂಸ್ಕರಣೆ

ಎ. ಬೂದು ನೀರು ಕಪ್ಪುನೀರಿನ ಯಾವುದೇ ಅಂಶವನ್ನು ಒಳಗೊಂಡಿರದ ಸಂದರ್ಭದಲ್ಲಿ, ಅಂತಹ ಬೂದು ನೀರನ್ನು ಉತ್ಪಾದನೆಯ ಮೂಲಕ್ಕೆ ಸಾಧ್ಯವಾದ ಮಟ್ಟಿಗೆ ನಿಕಟವರ್ತಿಯೆಂಬಂತೆ ಸಂಸ್ಕರಿಸತಕ್ಕದ್ದು.

ಬಿ. ನಿಷ್ಕ್ರಿಯ ಬೂದು ನೀರು ಸಂಸ್ಕರಣಾ ವ್ಯವಸ್ಥೆಯನ್ನು ಹೀರು ಹೊಂಡಗಳು ಅಥವಾ ಹೊರಬಿಡುವ ಕಂದಕಗಳೂ ಒಳಗೊಂಡಂತೆ ನಿರ್ಮಾಣ ಮಾಡುವುದು ಆವರಣದ ಮಾಲೀಕನ ಕರ್ತವ್ಯವಾಗಿರತಕ್ಕದ್ದು ಮತ್ತು ಕೈತೋಟಗಳಿಗೆ ಸದರಿ ನೀರನ್ನು ಮರುಬಳಕೆ ಮಾಡತಕ್ಕದ್ದು.

ಸಿ. ಒಂದು ವೇಳೆ ಮಾಲೀಕನು ನಿಷ್ಕ್ರಿಯ ಸಂಸ್ಕರಣಾ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಹಣಕಾಸಿನ ಅಥವಾ ಸ್ಥಳಾಭಾವದಿಂದ ಸಾಧ್ಯವಾಗದಿದ್ದಲ್ಲಿ, ಹೀರು ಹೊಂಡಗಳು, ನಿರ್ಮಿತ ಹಸಿಭೂಮಿ, ಅಥವಾ ತ್ಯಾಜ್ಯ ಘನೀಕರಣ ತೊಟ್ಟಿಗಳು ಹಾಗೂ ಮುಚ್ಚಲಾದ ಸೂಕ್ತ ಮೇಲ್ಮೈ ಚರಂಡಿಗಳನ್ನು ಅಂತಹ ಸಂಸ್ಕರಣಾ ವ್ಯವಸ್ಥೆಗಳಿಗೆ ಅತೀ ಸಮೀಪವಿರುವ ಉತ್ಪಾದಕರಿಗೆ ಸೇರಿಸಿ ನಿರ್ಮಾಣ ಮಾಡುವ ಹೊಣೆಗಾರಿಕೆಯನ್ನು ಗ್ರಾಮ ಪಂಚಾಯತಿಯೇ ಹೊಂದಿರತಕ್ಕದ್ದು.

ಡಿ. ಸಂಸ್ಕರಣಾ ವ್ಯವಸ್ಥೆಯನ್ನು ಕೇಂದ್ರ ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ಇಂಜಿನಿಯರಿಂಗ ಸಂಸ್ಥೆಯು (ಸಿಪಿಎಚ್‌ಇಇಒ) ಹೊರಡಿಸಿರುವ ಮಾರ್ಗಸೂಚಿ ರೊಚ್ಚು ನೀರು ಮತ್ತು ಒಳಚರಂಡಿ ಸಂಸ್ಕರಣೆಯ

ಕೈಪಿಡಿ ಅಥವಾ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಯನ್ವಯ ನಿರ್ಮಾಣ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

## 9. ಕೇಂದ್ರೀಕೃತ ಸಂಸ್ಕರಣಾ ವ್ಯವಸ್ಥೆ

ಎ. ಒಂದು ವೇಳೆ ಮೇಲೆ ನಿರ್ದಿಷ್ಟ ಪಡಿಸಿದಂತೆ ನಿಷ್ಕ್ರಿಯ ವಿಕೇಂದ್ರಿಕೃತ ಬೂದು ನೀರು ಸಂಸ್ಕರಣಾ ವ್ಯವಸ್ಥೆಗಳನ್ನು ಜನಸಂಖ್ಯಾ ಸಾಂದ್ರತೆ ಮತ್ತು ಸ್ಥಳಾಭಾವದಿಂದ ನಿರ್ಮಾಣ ಮಾಡಲು ಸಾಧ್ಯವಾಗದಿದ್ದಲ್ಲಿ, ಗ್ರಾಮ ಪಂಚಾಯತಿಯು ಕಪ್ಪು ನೀರು ಮತ್ತು ಬೂದು ನೀರನ್ನು ಸಂಸ್ಕರಣೆ ಮಾಡುವ ಸಲುವಾಗಿ ಒಂದು ಸಂಯೋಜಿತ ಸಂಸ್ಕರಣಾ ಸ್ಥಾವರವನ್ನು ಸ್ಥಾಪಿಸಬಹುದು

ಬಿ. ಅಂತಹ ಸಂಸ್ಕರಣಾ ಸ್ಥಾವರಗಳಿಗೆ ಅಳವಡಿಸಲಾಗುವ ತಂತ್ರಜ್ಞಾನವು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಗಳ ಆಧಾರಿತವಾಗಿರತಕ್ಕದ್ದು.

ಸಿ. ಸಂಯೋಜಿತ ಸಂಸ್ಕರಣಾ ಸ್ಥಳವು ಏಕೈಕ ಗ್ರಾಮ ಪಂಚಾಯತಿಯಾಗಲೀ ಅಥವಾ ಒಂದು ವೇಳೆ ಗ್ರಾಮ ಪಂಚಾಯತಿಗಳು ಅತ್ಯಂತ ಸಮೀಪವಾಗಿದ್ದಲ್ಲಿ ಅಂತಹ ಗ್ರಾಮ ಪಂಚಾಯತಿಗಳ ಸಮೂಹದಿಂದಾಗಲೀ ಸ್ಥಾಪಿಸಲ್ಪಡಬಹುದು.

ಡಿ. ದ್ರವ ತ್ಯಾಜ್ಯವನ್ನು ಸಂಯೋಜಿತ ಸಂಸ್ಕರಣಾ ಸ್ಥಾವರಕ್ಕೆ ಅಸ್ತಿತ್ವದಲ್ಲಿರುವ ಚರಂಡಿಗಳು ಅಥವಾ ಈ ಉದ್ದೇಶಕ್ಕಾಗಿಯೇ ಗ್ರಾಮ ಪಂಚಾಯತಿಗಳಿಂದ ನಿರ್ಮಾಣವಾಗುವಂತಹ ಚರಂಡಿಗಳ ಮೂಲಕ ಹರಿಯಬಿಡತಕ್ಕದ್ದು. ಪರಂತು ಗ್ರಾಮ ಪಂಚಾಯತಿಗಳು ಉತ್ಪಾದಕರ ಆವರಣಗಳಿಗೆ ಆದಷ್ಟು ನಿಕಟವಾಗಿ ಚರಂಡಿ ಕೊಳವೆಗಳನ್ನು ಅಳವಡಿಸತಕ್ಕದ್ದು.

## 10. ಚರಂಡಿಗಳಿಗೆ ಸಂಪರ್ಕ

ಎ. ಎಲ್ಲಾ ಉತ್ಪಾದಕರುಗಳೂ ಸಹ ತಮ್ಮ ಕಪ್ಪು ನೀರು ಮತ್ತು ಬೂದು ನೀರು ಹೊರ ಹರಿವನ್ನು ಸಂಯೋಜಿಸತಕ್ಕದ್ದು ಮತ್ತು ಅವುಗಳನ್ನು ಈ ಉಪ–ವಿಧಿಗಳನ್ವಯ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ಹೊರಡಿಸಲಾದ ಇತರ ವಿನಿಯಮಗಳನ್ವಯ ಚರಂಡಿಗೆ ಸಂಪರ್ಕವನ್ನು ಕಲ್ಪಿಸತಕ್ಕದ್ದು.

ಬಿ. ಎಲ್ಲಾ ಉತ್ಪಾದಕರುಗಳು ಸಹ ಚರಂಡಿಗಳಿಗೆ ಯಾವುದೇ ಸಂಪರ್ಕವನ್ನು ಕಲ್ಪಿಸುವ ಪೂರ್ವದಲ್ಲಿ ಗ್ರಾಮ ಪಂಚಾಯತಿಯ ಅನುಮೋದನೆಯನ್ನು ಪಡೆಯತಕ್ಕದ್ದು.

ಸಿ. ಎಲ್ಲಾ ಸಂಪರ್ಕಗಳೂ ಸಹ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆಯು ವ್ಯಾಸ, ವಸ್ತುಗಳು, ಆಳ, ಹರಿವು ಮತ್ತು ಹೊರ ಹರಿವಿನ ದಿಕ್ಕುಗಳ ಕುರಿತಂತೆ ಹೊರಡಿಸಿರುವ ಅನ್ವಯವಾಗುವ ಮಾರ್ಗಸೂಚಿಗಳನ್ನು ಪಾಲನೆ ಮಾಡತಕ್ಕದ್ದು ಮತ್ತು ಅವುಗಳ ಕಾಮಗಾರಿಗಳನ್ನು ತರಬೇತಿ ಪಡೆದ ಮೇಸ್ತ್ರಿಗಳಿಂದಲೇ ಮಾಡಿಸತಕ್ಕದ್ದು.

ಡಿ. ಚರಂಡಿಯ ಮಾರ್ಗವು ನೀರಿನಿಂದ ಚರಂಡಿಗೆ ಯುಕ್ತವಾದ ಇಳಿಜಾರನ್ನು ಹೊಂದಿರತಕ್ಕದ್ದು ಮತ್ತು ಸೂಕ್ತ ಸಂಖ್ಯೆಯ ಆಳುಗುಂಡಿಗಳನ್ನು(Manhole)ಚರಂಡಿ ಮಾರ್ಗದ ನಿರ್ವಹಣೆಗಾಗಿ ಒದಗಿಸಿರತಕ್ಕದ್ದು.

ಇ. ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿ ಸಾಧ್ಯವಾದ ಮಟ್ಟಿಗೆ, ಎಲ್ಲಾ ಕಟ್ಟಡಗಳವರೆಗೆ/ದ್ರವ ತ್ಯಾಜ್ಯ ಉತ್ಪಾದಕರುಗಳ ಆವರಣಗಳಿಗೆ ಸಮೀಪದಲ್ಲಿ ಸಾರ್ವಜನಿಕ ಚರಂಡಿ ಮಾರ್ಗವನ್ನು ಒದಗಿಸತಕ್ಕದ್ದು.

ಎಫ್.ಗ್ರಾಮ ಪಂಚಾಯತಿಯು, ಸಾಧ್ಯವಾದ ಮಟ್ಟಿಗೆ ಪೂರ್ಣವಾಗಿ ಅಥವಾ ಭಾಗಶಃ ಸ್ವೀಕರ್ತಗಳು, ಅಳವಡಿಕೆಗಳು, ಕೊಳವೆಗಳು ಮತ್ತು ಇತರ ಉಪಕರಣಗಳನ್ನು ಏನೇ ಆಗಿರಲಿ, ಖಾಸಗಿ ಆವರಣಗಳು ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿ ದ್ರವ ತ್ಯಾಜ್ಯವನ್ನು ಸ್ವೀಕರಿಸಲು ಮತ್ತು ನಿರ್ವಹಿಸಲು ಅವಕಾಶವನ್ನು ಕಲ್ಪಿಸತಕ್ಕದ್ದು.

ಜಿ. ಗ್ರಾಮ ಪಂಚಾಯತಿಗಳು ಅಧಿನಿಯಮದ ಪ್ರಕರಣ 100ರಲ್ಲಿ ತಿಳಿಸಿರುವಂತೆ, ಯಾವುದೇ ಚರಂಡಿ ವ್ಯವಸ್ಥೆಯನ್ನು ಯಾವುದೇ ರಸ್ತೆಯ ಮೂಲಕ, ಅದರ ಮಾರ್ಗದಲ್ಲಿ ಅಥವಾ ಅದರಡಿಯಲ್ಲಿ ಕೊಂಡೊಯ್ಯಲು ಮಾಲೀಕನಿಗಾಗಲೀ ಅಥವಾ ಆವರಣದ ಸ್ವಾಧೀನಾನುಭವವನ್ನು ಹೊಂದಿರುವಂತಹ ವ್ಯಕ್ತಿಗಾಗಲೀ ಲಿಖಿತ ರೂಪದಲ್ಲಿ ಸೂಕ್ತ ನೋಟೀಸನ್ನು ಜಾರಿ ಮಾಡಿದ ತರುವಾಯ ನಿರ್ದೇಶನಗಳನ್ನು ನೀಡತಕ್ಕದ್ದು.

ಎಚ್. ಗ್ರಾಮ ಪಂಚಾಯತಿಯು ಯಾವುದೇ ದೋಷಪೂರ್ಣ" ಚರಂಡಿಗಳನ್ನು ದ್ರವ ತ್ಯಾಜ್ಯವನ್ನು ನಿರ್ವಹಿಸಲು ಅನುವಾಗುವಂತೆ ಈ ಉಪವಿಧಿಗಳ ಉಪಬಂಧಗಳಡಿಯಲ್ಲಿ ಸರಿಪಡಿಸಲು ಅಗತ್ಯ ಕ್ರಮಗಳನ್ನು ವಹಿಸತಕ್ಕದ್ದು.

ಐ. ಪಂಚಾಯತಿ ಪ್ರದೇಶದಲ್ಲಿ ಮಳೆಗಾಲದಲ್ಲಿ ಯಾವುದೇ ಹೆಚ್ಚಿನ ಹರವು ಉಂಟಾಗುವುದನ್ನು ತಡೆಗಟ್ಟುವ ಉದ್ದೇಶಗಳಿಂದ ಕಟ್ಟಡಗಳ ಮಟ್ಟವು ಚರಂಡಿಗಳಿಗಿಂತ ಮತ್ತು ಚರಂಡಿ ವ್ಯವಸ್ಥೆಗಳಿಗಿಂತ ಕೆಳಮಟ್ಟದಲ್ಲಿರತಕ್ಕದ್ದಲ್ಲ .

ಜೆ. ಗ್ರಾಮ ಪಂಚಾಯತಿಯು ಉತ್ಪಾದಕರಿಗೆ ಹೊರ ಹರಿವು ಮಾರ್ಗವನ್ನು ಚರಂಡಿ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಸಲುವಾಗಿ ಒಂದು ಬಾರಿಯ ಶುಲ್ಕವನ್ನು ವಸೂಲು ಮಾಡತಕ್ಕದ್ದು.

## 11. ಆಳುಗುಂಡಿಗಳ (Manhole) ಸ್ವಚ್ಛತೆಗೆ ಸಂಬಂಧಿಸಿದಂತೆ ಉಪಬಂಧಗಳು.

ಎ. ಗ್ರಾಮಪಂಚಾಯತಿಯು ಮಾನವ ಮಧ್ಯಪ್ರವೇಶವು ನಿಖರವಾಗಿ ಅಗತ್ಯವಿರದ ಹೊರತು ಆಳುಗುಂಡಿಗಳ ಸ್ವಚ್ಛತೆಗಾಗಿ ಯಾಂತ್ರೀಕೃತ ಸ್ವಚ್ಛತೆಯನ್ನುಮಾತ್ರ ಅಳವಡಿಸಿಕೊಳ್ಳುವುದನ್ನು ಖಾತ್ರಿ ಪಡಿಸತಕ್ಕದ್ದು.

ಬಿ. ಗ್ರಾಮ ಪಂಚಾಯತಿಯು ಕಡ್ಡಾಯವಾಗಿ ಆಳುಗುಂಡಿಯ ಸ್ವಚ್ಛತಾ ಸಿಬ್ಬಂದಿಗೆ ಸಮವಸ್ತ್ರ, ಕೈಕವಚಗಳು, ರೈನ್ ಕೋಟುಗಳು, ಯುಕ್ತ ಅಂಟು ಬೂಟುಗಳು, ತಲೆಗವಚ, ನೇತ್ರ ನೆರಳು, ಮತ್ತು ಮುಖವಾಡಗಳಂತಹ ಅವಶ್ಯಕ ಸುರಕ್ಷತಾ ಸಲಕರಣೆಗಳನ್ನು ವಿತರಣೆ ಮಾಡತಕ್ಕದ್ದು.

ಸಿ ಆಳುಗಿಂಡಿಯೊಳಗೆ ಸಿಬ್ಬಂದಿಗಳು ಇಳಿಯುವ ಪೂರ್ವದಲ್ಲಿ ಗ್ರಾಮ ಪಂಚಾಯತಿಯು ವಿಷಕಾರಿ ಮತ್ತು ಅಗ್ನಿಅವಘಡಿತ ಅನಿಲಗಳು ಇರುವ ಕುರಿತಂತೆ ತಪಾಸಣೆಯನ್ನು ಕೈಗೊಳ್ಳತಕ್ಕದ್ದು.

ಡಿ. ಗ್ರಾಮ ಪಂಚಾಯತಿಯು ಎಲ್ಲಾ ಆಳುಗುಂಡಿ ಕಾರ್ಮಿಕರು ಗ್ರಾಮ ಪಂಚಾಯತಿ ಅಥವಾ ಏಜೆನ್ಸಿಯ ವತಿಯಿಂದ ಆಯೋಜಿಸಲಾಗುವ ಸುರಕ್ಷತೆ ಮತ್ತು ಆರೋಗ್ಯ ತರಬೇತಿ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಹಾಜರಾಗುವುದನ್ನು ಖಾತ್ರಿ ಪಡಿಸತಕ್ಕದ್ದು.

ಇ. ಎಲ್ಲಾ ಆಳುಗುಂಡಿ ಕಾರ್ಮಿಕರುಗಳು ಗ್ರಾಮ ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯಿಂದ ಆಳುಗುಂಡಿಯ ಶುಚೀಕರಣಕ್ಕಾಗಿ ಪ್ರಾಧೀಕರಿಸಲಾದ ಏಜೆನ್ಸಿಯಿಂದ ನಿಯತಕಾಲಿಕ ವೈದ್ಯಕೀಯ ಪರೀಕ್ಷೆಗೆ ಒಳಪಡುವುದನ್ನು ಖಚಿತ ಪಡಿಸತಕ್ಕದ್ದು.

ಎಫ್.ಗ್ರಾಮ ಪಂಚಾಯತಿಯಾಗಲೀ ಅಥವಾ ಆಳುಗುಂಡಿ ಶುಚೀಕರಣಕ್ಕಾಗಿ ಅದರಿಂದ ಪ್ರಾಧೀಕರಿಸಲಾದ ಏಜೆನ್ಸಿಯು ಎಲ್ಲಾ ಕಾರ್ಮಿಕರಿಗೆ ಎಲ್ಲ ರೀತಿಯ ಸುರಕ್ಷಿತ ಉಪಕರಣಗಳು ಮತ್ತು ಕಾರ್ಮಿಕರಿಗೆ ಉಂಟಾಗುವ ಯಾವುದೇ ಗಾಯ ಅಥವಾ ನಷ್ಟವನ್ನು ತುಂಬಿಕೊಡುವುದಕ್ಕೆ ಬದ್ಧವಾಗಿರತಕ್ಕದ್ದು.

ಜಿ. ಆಳುಗುಂಡಿಗಳ ಶುಚಿತ್ವವನ್ನು ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು ನವೆಂಬರ್ , 2018ರಲ್ಲಿ ಹೊರಡಿಸಿದ ಚರಂಡಿಗಳು ಮತ್ತು ರೊಚ್ಚು ತೊಟ್ಟಿಗಳ ಸ್ವಚ್ಛತೆಯ ಗುಣಮಟ್ಟದ ಚಾಲನಾ ವಿಧಿವಿಧಾನದಲ್ಲಿ ನಮೂದಿಸಿರುವಂತಹ ಸುರಕ್ಷತಾ ಎಚ್ಚರಿಕೆ ಕ್ರಮಗಳಿಗೆ ಸ್ಥಿರಪಡುವಂತೆ ಕೈಗೊಳ್ಳತಕ್ಕದ್ದು.

## 12. ಇತರ ತ್ಯಾಜ್ಯೋತ್ಪಾದಕರು

ಎ. ಕೈಗಾರಿಕಾ ಘಟಕಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕಸಾಯಿಖಾನೆಗಳು, ಮತ್ತು ಮಾಂಸ ಮಾರುಕಟ್ಟೆಗಳು ತಮ್ಮ ಸ್ವಂತ ವೆಚ್ಚದಲ್ಲಿ ಪರಿಸರ ಸಂರಕ್ಷಣಾ ಅಧಿನಿಯಮ, 1986ರಲ್ಲಿ ಅಥವಾ ಸಿಪಿಸಿಬಿ ಅಥವಾ ಕೆಎಸ್‌ಪಿಸಿಬಿಯಿಂಎದ ನಿರ್ದಿಷ್ಟ ಪಡಿಸಲಾದ ಗುಣಮಟ್ಟಕ್ಕನುಗುಣವಾಗಿ ಸಂಸ್ಕರಣಾ ಕ್ರಮಗಳನ್ನು ಸ್ಥಾಪಿಸತಕ್ಕದ್ದು, ಚಾಲನೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

# ಅಧ್ಯಾಯ – IV

## ಜಲ/ವೈರಾಣು ಮತ್ತು ಆಹಾರದ ಮೂಲಕ ಹರಡುವ ರೋಗಗಳ ನಿರ್ಬಂಧ

### 13. ಜಲ/ವೈರಾಣು ಉತ್ಪತ್ತಿಯ ನಿರ್ಬಂಧ

ಎ. ಗ್ರಾಮ ಪಂಚಾಯತಿಯು, ಕಾಲಕಾಲಕ್ಕೆ, ಜಲಾಧಾರಿತ, ವೈರಾಣು ಆಧಾರಿತ ಮತ್ತು ಆಹಾರ ಆಧಾರಿತ ರೋಗಗಳನ್ನು ನಿರ್ಬಂಧಿಸುವ ಉದ್ದೇಶಕ್ಕಾಗಿ ನಿರ್ದೇಶನಗಳನ್ನು ಹೊರಡಿಸಬಹುದು, ಮತ್ತು ಇದರಲ್ಲಿ ಜಲ ಸಂಗ್ರಹ/ತೊಟ್ಟಿಗಳು, ಚರಂಡಿಗಳ ನಿರ್ಮಾಣ, ನಿರ್ವಹಣೆಗಳ ನಿರ್ದಿಷ್ಟತೆಗೆ ಸಂಬಂಧಿಸಿದ ಅಥವಾ ಇತರ ಯಾವುದೇ ತತ್ಸಂಬಂಧಿತ ವಿಷಯಗಳು ಒಳಗೊಂಡಿರಬಹುದು.

ಬಿ. ಈ ನಿರ್ದೇಶನಗಳನ್ನು ಗ್ರಾಮ ಪಂಚಾಯತಿಯ ವ್ಯಾಪ್ತಿಯ ಸಾಮಾನ್ಯ ಜನರು ಅಥವಾ ನಿರ್ದಿಷ್ಟ ಉತ್ಪಾದಕರಿಗೆ ಸಂಬಂಧಿಸಿದಂತೆ ಹೊರಡಿಸಬಹುದು.

ಸಿ. ಎಲ್ಲಾ ಉತ್ಪಾದಕರೂ ಸಹ ವೈರಾಣುಗಳ ಉತ್ಪತ್ತಿಯನ್ನು ತಮ್ಮ ಆವರಣಗಳಲ್ಲಿ ತಡೆಗಟ್ಟಲು(ಅದರಲ್ಲಿನ ಯಾವುದೇ ಕೃತಕ ಜಲಮೂಲಗಳೂ ಒಳಗೊಂಡಂತೆ) ಜಲ ಸಂಗ್ರಹಣೆ, ತ್ಯಾಜ್ಯವನ್ನು ರಾಶಿ ಹಾಕುವುದು, ಅವರ ಗೋಡೆಗಳಲ್ಲಿನ ಬಿರುಕುಗಳನ್ನು ತಡೆಗಟ್ಟುವುದೇ ಅಲ್ಲದೆ ನಿಯಮಿತವಾಗಿ ಸ್ವಚ್ಛಗೊಳಿಸುವಿಕೆ, , ನಿರ್ವಹಣೆ ಮತ್ತು ಕೀಟ ನಿರೊಧ ಕ್ರಮಗಳನ್ನು ತಮ್ಮ ಆವರಣಗಳಲ್ಲಿ ತೆಗೆದುಕೊಳ್ಳತಕ್ಕದ್ದು.

ಡಿ. ಗ್ರಾಮ ಪಂಚಾಯತಿಯು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿನ ಆರೋಗ್ಯಕ್ಕೆ ಹಾನಿಕಾರಕವಾದ ಅಥವಾ ನೆರೆಯವರಿಗೆ ತೊಂದರೆಯನ್ನುಂಟು ಮಾಡುವ ಯಾವುದೇ ಜಲಮೂಲ, ಚರಂಡಿ, ಒಳಚರಂಡಿ ಇತ್ಯಾದಿಗಳನ್ನು ಭರ್ತಿ ಮಾಡಲು, ಸ್ವಚ್ಛಗೊಳಿಸಲು ನಿರ್ದೇಶನಗಳನ್ನು ಹೊರಡಿಸಬಹುದು.

ಇ. ಈ ವಿಧಿಯ ಉದ್ದೇಶಗಳಿಗಾಗಿ, 'ವೈರಾಣು ಆಧಾರಿತ ರೋಗಗಳು' ಎಂದರೆ, ಸೋಂಕು ಇರುವ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಯಾವುದೇ ನರರೂಪಿ ಅಥವಾ ಇತರ ಮೂಲಗಳಿಂದ ಮತ್ತು ಕೆಲವು ಸಂದರ್ಭಗಳಲ್ಲಿ ಮಧ್ಯವರ್ತಿ ಅತಿಥೇಯನ ರೂಪದಲ್ಲಿರುವ ರೋಗಾಣುಗಳು ಪಸರಿಸುವ ಮೂಲಕ ಉದ್ಭವಿಸುವಂತಹ ರೋಗಗಳು.

### 14. ನಿರ್ದಿಷ್ಟ ಉತ್ಪಾದಕರಿಂದ ವೈರಾಣುವಿನ ಉತ್ಪತ್ತಿಯ ನಿರ್ಬಂದ

ಎ. ಈ ಕೆಳಗೆ ನಿರ್ದಿಷ್ಟ ಪಡಿಸಿರುವ ಆವರಣಗಳ ಸ್ವಾಧೀನಾನುಭವವನ್ನು ಹೊಂದಿರುವಂತಹ ಉತ್ಪಾದಕರು ಕೆಳಕಂಡ ಹೆಚ್ಚುವರಿ ಅಗತ್ಯಗಳನ್ನು ಪೂರೈಸತಕ್ಕದ್ದು.

ಬಿ. ಹೈನುಗಾರಿಕೆ ಮತ್ತು ದನಗಳ ಕೊಟ್ಟಿಗೆ

i. ಉತ್ಪಾದಕನು ದನದ ಕೊಟ್ಟಿಗೆಯನ್ನು ನಿಯಮಿತವಾಗಿ ಸ್ವಚ್ಛಗೊಳಿಸತಕ್ಕದ್ದು ಮತ್ತು ವೈರಾಣುಗಳನ್ನು ನಿರ್ಬಂಧಿಸುವ ಸಲುವಾಗಿ ಕೀಟ ನಾಶಕಗಳನ್ನು ಸಿಂಪಡಿಸತಕ್ಕದ್ದು.

ii. ಜಾನುವಾರುಗಳಿಗೆ ಕುಡಿಯುವ ನೀರನ್ನು ತೆರೆದಿಡುವುದಾಗಲೀ ಅಥವಾ ಸ್ಥಗಿತಗೊಳಿಸತಕ್ಕದ್ದಾಗಲೀ ಮಾಡಬಾರದೆಂಬ ಅಂಶವನ್ನು ಉತ್ಪಾದಕನು ಖಾತ್ರಿ ಪಡಿಸತಕ್ಕದ್ದು

ಸಿ. ಕಸಾಯಿಖಾನೆಗಳು ಮತ್ತು ಮಾಂಸದ ಮಾರುಕಟ್ಟೆ

i. ಉತ್ಪಾದಕರುಗಳು ಕಸಾಯಿಖಾನೆಗಳು ಸೂಕ್ತ ಗಾಳಿ ಬೆಳಕಿನ ವ್ಯವಸ್ಥೆಯನ್ನು ಹೊಂದಿರತಕ್ಕದ್ದೆಂದು ಮತ್ತು ಮೇಲ್ಮೈಗಳು ವಿಷರಹಿತ ಸೋಂಕು ಮುಕ್ತತೆಯ ಮೂಲಕ ವಾಯು ಜೀವಿ ಮತ್ತು ದುರ್ಗಂಧ ನಾಶಕ ದ್ರವ್ಯಗಳ ಮೂಲಕ ಸೋಂಕು ರಹಿತಗೊಳಿಸತಕ್ಕದ್ದನ್ನು ಖಾತ್ರಿ ಪಡಿಸತಕ್ಕದ್ದು.

ಡಿ. ನಿರ್ಮಾಣ ಸ್ಥಳಗಳು

i. ಮಾಲೀಕನಾಗಲೀ ಅಥವಾ ಆತನ ಪರವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ನಡೆಸುತ್ತಿರುವ ಇತರ ಯಾರೇ ವ್ಯಕ್ತಿಯಾಗಲೀ ಅವರ ಪರವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವ ಎಲ್ಲಾ ಕಾರ್ಮಿಕರಿಗೂ ಸಹ ಸ್ವಚ್ಛ ಕುಡಿಯುವ ನೀರು ಮತ್ತು ಸ್ವಚ್ಛ ಶೌಚಾಲಯಗಳನ್ನು ನಿರ್ಮಾಣ ಸ್ಥಳದಲಿ ಮತ್ತು ಅದರ ಸಮೀಪದಲ್ಲಿ ತಾತ್ಕಾಲಿಕ ವಾಸ ಸ್ಥಳಗಳನ್ನು ಕಾರ್ಮಿಕರ ಸಲುವಾಗಿ ನಿರ್ಮಾಣ ಮಾಡಿದ್ದಲ್ಲಿ ಒದಗಿಸತಕ್ಕದ್ದು.

ii. ಮಾಲೀಕನಾಗಲೀ ಅಥವಾ ಆತನ ಪರವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ನಡೆಸುತ್ತಿರುವ ಇತರ ಯಾರೇ ವ್ಯಕ್ತಿಯಾಗಲೀ ನಿರ್ಮಾಣ ಸ್ಥಳದ ಕಾರ್ಮಿಕರಿಗಾಗಿ ತಾತ್ಕಾಲಿಕ ವಾಸದ ಸ್ಥಳಗಳ ನಿರ್ಮಾಣ ಮಾಡಿದ್ದಲ್ಲಿ ಅದರ ಸುತ್ತಲಿನ ಪ್ರದೇಶದ ನೈರ್ಮಲ್ಯ ಮತ್ತು ಸ್ವಚ್ಛತೆಯನ್ನು ಖಾತ್ರಿ ಪಡಿಸತಕ್ಕದ್ದು.

# ಅಧ್ಯಾಯ V

## ಗ್ರಾಮ ಪಂಚಾಯತಿಯಲ್ಲಿನ ವಿವಿಧ ಭಾಗೀದಾರರುಗಳ ಅಧಿಕಾರ ಮತ್ತು ಕರ್ತವ್ಯಗಳು

15. ಈ ಉಪವಿಧಿಗಳನ್ವಯ ಗ್ರಾಮ ಪಂಚಾಯತಿಯು ಪ್ರಮುಖವಾಗಿ ದ್ರವ ತ್ಯಾಜ್ಯದ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು.

16. **ಯೋಜನೆ ಮತ್ತು ನಿರ್ವಹಣೆ.** – ಅಧಿನಿಯಮದಡಿಯಲ್ಲಿ ರಚಿಸಲಾದ **ಗ್ರಾಮ ಪಂಚಾಯತಿಯು** ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯಾಗಲೀ ಅಥವಾ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಆಹಾರ ಸಮಿತಿಯಾಗಲೀ ಅಥವಾ ಅವುಗಳ ಅನುಪಸ್ಥಿತಿಯಲ್ಲಿ, ಗ್ರಾಮ ಪಂಚಾಯತಿಯಾಗಲೀ ದ್ರವ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕೆಳಕಂಡ ಕರ್ತವ್ಯಗಳ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

ಎ. ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಭೂಮಿಯನ್ನು ಗುರುತಿಸುವುದು ಮತ್ತು ಹಂಚಿಕೆ ಮಾಡತಕ್ಕದ್ದು.

ಬಿ. ಗ್ರಾಮ ಪಂಚಾಯತಿ ಅಬಿವೃದ್ಧಿ ಯೋಜನೆಯ ಭಾಗವಾಗಿ ನೈರ್ಮಲ್ಯ ಯೋಜನೆ, ವಿಸ್ತೃತ ಯೋಜನಾ ವರದಿ, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಿಗಾಗಿ ಗ್ರಾಮ ಪಂಚಾಯತಿಯು ಒಟ್ಟಾರೆ ಆಯವ್ಯಯದಲ್ಲಿ ಶೇ 25%ಕ್ಕಿಂತ ಕಡಿಮೆ ಇರದಂತೆ ವಾರ್ಷಿಕ ಆಯವ್ಯಯದ ತಯಾರಿಕೆ ಮತ್ತು ಗ್ರಾಮ ಸಭೆಯಲ್ಲಿ ಅಂತಹ ಇತರ ಯೋಜನೆಗಳು ಮತ್ತು ಆಯವ್ಯಯದ ಅನುಮೋದನೆ.

ಸಿ. ಉತ್ಪಾದಕರು ವೈಯಕ್ತಿಕವಾಗಿ ವಾಸದ ಮನೆಯಲ್ಲಿ ಶೌಚಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹಕಗಳನ್ನು ನೀಡುವುದು.

ಡಿ. ಚರಂಡಿ ವ್ಯವಸ್ಥೆ, ಶೌಚಾಲಯ, ಮೂತ್ರಾಲಯಕ್ಕಾಗಿ ಸ್ಥಳವನ್ನು ಆವರಣದಲ್ಲಿ ಈ ಉಪವಿಧಿಗಳನ್ವಯ ಸ್ಥಿರೀಕರಿಸದಿದ್ದಲ್ಲಿ, ಗ್ರಾಮ ಪಂಚಾಯತಿಗಳಿಗೆ ಸಲ್ಲಿಸಲಾದ ಅಂತಹ ಕಟ್ಟಡಗಳ ನಕ್ಷೆಗೆ ಅನುಮೋದನೆಯನ್ನು ನೀಡತಕ್ಕದ್ದಲ್ಲವೆಂಬ ಅಂಶವನ್ನು ಖಚಿತ ಪಡಿಸತಕ್ಕದ್ದು.

ಇ. ಗ್ರಾಮ ಪಂಚಾಯತಿಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆ ಮತ್ತಿತರ ಹೊಣೆಗಾರಿಕೆಯ ಕರ್ತವ್ಯಗಳಿಗೆ ಅಗತ್ಯವಿರುವ ಅನುದಾನವನ್ನು ಪೂರೈಕೆ ಮಾಡಿದ ನಂತರವೇ ವಿವೇಚನಾ ಕರ್ತವ್ಯಗಳಿಗೆ ಅನುದಾನವನ್ನು ಬಿಡುಗಡೆ ಮಾಡುವುದನ್ನು ಖಾತ್ರಿ ಪಡಿಸತಕ್ಕದ್ದು.

ಎಫ್. ದ್ರವ ತ್ಯಾಜ್ಯ ನಿರ್ವಹಣಾ ಉತ್ಪಾದಕರಿಗೆ ಈ ಉಪವಿಧಿಗಳ ಅನುಸೂಚಿ –11 ರನ್ವಯ ವಿಧಿಸಲಾಗುವ ದರವನ್ನು ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳ ಚಾಲನಾ ವೆಚ್ಚಗಳಿಗಾಗಿ ಬಳಕೆ ಮಾಡಬಹುದು.

ಜಿ. ಜೈವಿಕ ವಿಘಟಿತ ಸ್ಯಾನಿಟರಿ ಪ್ಯಾಡುಗಳು ಮತ್ತು ಮಾಸಿಕ ಋತುಚಕ್ರ ಕಪ್ಪುಗಳನ್ನೂ ಒಳಗೊಂಡಂತೆ ಸುಲಭವಾಗಿ ದೊರೆಯಬಹುದಾದ ಮತ್ತು ಸ್ಥಿರೀಕೃತ ನೈರ್ಮಲ್ಯ ಉತ್ಪನ್ನಗಳ ಬಳಕೆ ಕುರಿತಂತೆ ಹೆಚ್ಚಿನ ಅರಿವನ್ನು ಮೂಡಿಸತಕ್ಕದ್ದು.

ಎಚ್. ಸುರಕ್ಷಿತ ದ್ರವ ತ್ಯಾಜ್ಯ ಸಂಸ್ಕರಣಾ ಸ್ಥಾವರಕ್ಕೆ ಅಗತ್ಯವಿರುವಂತಹ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡುವ ಸಲುವಾಗಿ ಮತ್ತು ದ್ರವತ್ಯಾಜ್ಯ ಸಂಸ್ಕರಣಾ ಸ್ಥಾವರಗಳ ನಿರ್ಮಾಣ ಮತ್ತು ಚಾಲನೆಗಾಗಿ ಕಾಮಗಾರಿಗಳು ಮತ್ತು ವೆಚ್ಚಗಳಿಗೆ ಅನುಮೋದನೆಯನ್ನು ನೀಡತಕ್ಕದ್ದು.

ಐ. ಉಪವಿಧಿಗಳ ಅನುಸೂಚಿ 11 ರನ್ವಯ ಸಂಗ್ರಹಿಸಿದಂತಹ ಬಳಕೆದಾರರ ಶುಲ್ಕವನ್ನು ಚರಂಡಿಗಳ ನಿಯತಕಾಲಿಕ ಸ್ವಚ್ಛತೆ ಮತ್ತು ಸಂಸ್ಕರಣಾ ವ್ಯವಸ್ಥೆಗಳ ಸೂಕ್ತ ನಿರ್ವಹಣೆಯ ಉದ್ದೇಶಗಳಿಗಾಗಿ ಬಳಸಬಹುದು.

ಜೆ. ನೈರ್ಮಲ್ಯ ಯೋಜನೆಗಳ ಪರಿಣಾಮದ ಮೇಲ್ವಿಚಾರಣೆ ನಡೆಸುವ ಸಲುವಾಗಿ ಸ್ಥಳೀಯ ಆರೋಗ್ಯ ಮತ್ತು ಪರಿಸರಾತ್ಮಕ ಪರಿಸ್ಥಿತಿಗಳ ನಿಯಮಿತ ನಿರ್ಧರಣೆಯನ್ನು ನಡೆಸತಕ್ಕದ್ದು.

ಕೆ. ವೆಚ್ಚಗಳ ಸಂಬಂಧದ ದ್ರವ ತ್ಯಾಜ್ಯ ನಿರ್ವಹಣಾ ಕಾರ್ಯ ಚಟುವಟಿಕೆಗಳಿಗಾಗಿ ವಾರ್ಷಿಕ ಆಯವ್ಯಯದ ಪರಿಶೀಲನೆ.

ಎಲ್. ಗ್ರಾಮ ಪಂಚಾಯತಿಯಲ್ಲಿ ದ್ರವ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳ ಅನುಷ್ಠಾನ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಗತಿಯ ತ್ರೈಮಾಸಿಕ ಮತ್ತು ವಾರ್ಷಿಕ ವರದಿಯನ್ನು ಸಿದ್ಧ ಪಡಿಸತಕ್ಕದ್ದು.

ಎಂ. ರಾಜ್ಯ ಸರ್ಕಾರದಿಂದ ಹೊರಡಿಸಲಾಗಿರುವ ಮಾರ್ಗಸೂಚಿಯನ್ವಯ ಭಾಗೀದರಾರುಗಳು, ಫಲಾನುಭವಿಗಳು ಸಂಕಷ್ಟದಲ್ಲಿರುವ ಸಮುದಾಯಗಳು ಮತ್ತಿತರ ಗ್ರಾಮ ಪಂಚಾಯತಿ ಸದಸ್ಯರೊಂದಿಗೆ ಸಮಾಲೋಚನೆಯನ್ನು ನಡೆಸಿ ಗ್ರಾಮ ಪಂಚಾಯತಿಯಲ್ಲಿ ಅಭಿವೃದ್ಧಿ ಪಡಿಸಲಾದ ನೈರ್ಮಲ್ಯ ಯೋಜನೆಯ ಸಾಮಾಜಿಕ ಪರಿಶೋಧನೆಯನ್ನು ಆಯೋಜಿಸತಕ್ಕದ್ದು.

ಎನ್. ಅನ್ವಯವಾಗುವ ಕಾಯಿದೆಗಳಡಿಯಲ್ಲಿ ನಿರ್ದೇಶಿಸಬಹುದಾದ ಇನ್ನಿತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಗಳು.

ಒ. ಗ್ರಾಮ ಪಂಚಾಯತಿಗಳ ಮತ್ತು ಅವುಗಳ ಸಮಿತಿಗಳ ವ್ಯವಹಾರಗಳ ನಿರ್ವಹಣೆಯು ಅಧಿನಿಯಮದಡಿಯಲ್ಲಿ ಉಪಬಂಧಿಸಿರುವ ವಿಧಿವಿಧಾನಗಳನ್ವಯ ಗ್ರಾಮ ಪಂಚಾಯತಿಗಳು ಅಥವಾ ಅವುಗಳ ಸಮಿತಿಗಳ ಸಭೆಯಲ್ಲಿ ನಡೆಯತಕ್ಕದ್ದು.

ಪಿ. ಪರಂತು ಗ್ರಾಮ ಪಂಚಾಯತಿಗಳು ಮತ್ತು/ಅಥವಾ ಅದರ ಸಮಿತಿಗಳು ಈ ಉಪವಿಧಿಗಳ ಉದ್ದೇಶಗಳಿಗಾಗಿ ಕನಿಷ್ಟ ಪಕ್ಷ ವರ್ಷದ ಪ್ರತಿ ಮೂರು ತಿಂಗಳುಗಳಿಗೊಮ್ಮೆ ಸಭೆ ನಡೆಸತಕ್ಕದ್ದು.

**17 ಪಂಚಾಯತಿ ಅಭಿವೃದ್ಧಿ ಅಧಿಕಾರಿ** ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಕೆಳಕಂಡ ಕರ್ತವ್ಯಗಳು ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕೆಳಕಂಡ ಹೊಣೆಗಾರಿಕೆಗೆ ಜವಾಬ್ದಾರನಾಗಿರತಕ್ಕದ್ದು.

ಎ. ಗ್ರಾಮ ಪಂಚಾಯತಿಯು ಅಭಿವೃದ್ಧಿ ಯೋಜನೆಯ ಭಾಗವಾಗಿ, ನೈರ್ಮಲ್ಯ ಯೋಜನೆ, ವಿವರವಾದ ಯೋಜನಾ ವರದಿ, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಿಗಾಗಿ ಆಯವ್ಯಯ ತಯಾರಿಕೆ ಮತ್ತು ಬಳಕೆದಾರರ ಶುಲ್ಕಗಳ ಲೆಕ್ಕ ಮಾಡುವ ಮತ್ತು ಅಂತಿಮಗೊಳಿಸುವ ನಿಟ್ಟಿನಲ್ಲಿ, ಗ್ರಾಮ ಪಂಚಾಯತಿ ಮತ್ತು ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ ಅಥವಾ ಗ್ರಾಮೀಣ ಆರೋಗ್ಯ, ನೈರ್ಮಲ್ಯ ಪೌಷ್ಠಿಕಾಂಶ ಆಹಾರ ಸಮಿತಿಗಳಿಗೆ ಸಹಾಯವನ್ನು ಒದಗಿಸತಕ್ಕದ್ದು.

ಬಿ. ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಸದಸ್ಯರಿಗೆ ವಿವಿಧ ತಂತ್ರಜ್ಞಾನಗಳು ಮತ್ತು ಯೋಜನೆಗಳ ಕುರಿತಂತೆ ಮಾಹಿತಿಯನ್ನು ಒದಗಿಸತಕ್ಕದ್ದು.

ಸಿ. ತ್ಯಾಜ್ಯ ಜಲ ಸಂಸ್ಕರಣಾ ಸ್ಥಾವರಗಳು, ಮೇಲ್ಮೈ ವ್ಯಾಪಿತ ಚರಂಡಿಗಳು, ಅನ್ವಯವಾಗುವ ಒಳಚರಂಡಿ ಮಾರ್ಗಗಳ ಸಂಬಂಧ ಅನುಷ್ಠಾನ, ಚಾಲನೆ ಮತ್ತು ನಿರ್ವಹಣೆ ಕುರಿತಾದ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

ಡಿ. ಗ್ರಾಮ ಪಂಚಾಯತಿಗಳಿಗೆ ಯುಕ್ತ ರೊಚ್ಚು ತೆರವುಗೊಳಿಸುವ ವಾಹನಗಳನ್ನು ಮತ್ತು ವಿಕೇಂದ್ರೀಕೃತ ಸಂಸ್ಕರಣಾ ವ್ಯವಸ್ಥೆಯನ್ನು ಪಡೆಯುವ ನಿಟ್ಟಿನಲ್ಲಿ ಸಹಕಾರವನ್ನು ನೀಡತಕ್ಕದ್ದು.

ಇ. ಮಹಿಳೆಯರು ಮತ್ತು ಹದಿವಯಸ್ಕರ ಬಾಲಕಿಯರನ್ನು ಗಮನದಲ್ಲಿಟ್ಟುಕೊಂಡು ಸ್ಥಿರ ನೈರ್ಮಲ್ಯ ಉತ್ಪನ್ನಗಳ ಬಳಕೆಯ ಬಗ್ಗೆ ಸೂಕ್ತ ತಿಳುವಳಿಕೆಯನ್ನೂ ಒಳಗೊಂಡಂತೆ ಮಹಿಳೆಯರ ಋತುಚಕ್ರ ಸ್ವಚ್ಛತಾ ನಿರ್ವಹಣೆಯನ್ನು ಕೈ ಗೊಳ್ಳತಕ್ಕದ್ದು.

ಎಫ್.ಎಫ್‌ಎಸ್‌ಟಿಪಿಗೆ ಸಂಬಂಧಿಸಿದಂತೆ ಅನ್ವಯವಾಗುವೆಡೆಯಲ್ಲಿ ಲೆಕ್ಕಪತ್ರಗಳು,ಸಂಪನ್ಮೂಲಗಳು,ಆಸ್ತಿಗಳು ಮತ್ತು ವ್ಯವಸ್ಥೆಗಳೂ ಒಳಗೊಂಡಂತೆ ದೈನಂದಿನ ಹಣಕಾಸು ನಿರ್ವಹಣೆ ಮತ್ತು ದಾಖಲೆಗಳ ನಿರ್ವಹಣೆಯಲ್ಲಿ ಸಹಾಯವನ್ನು ಒದಗಿಸತಕ್ಕದ್ದು.

ಜಿ. ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಸ್ಥಿತಿ ಮತ್ತು ಪಗ್ರತಿಗೆ ಸಾಕ್ಷ್ಯವಾಗುವಂತಹ ವರದಿಗಳು, ನಮೂನೆಗಳು ಮತ್ತಿತರ ದಸ್ತಾವೇಜುಗಳ ಸಿದ್ಧ ಪಡಿಸುವಿಕೆಯಲ್ಲಿ ಗ್ರಾಮ ಪಂಚಾಯತಿ ಮತ್ತು ನೈರ್ಮಲ್ಯ ಸಮಿತಿ ಅಥವಾ ಗ್ರಾಮೀಣ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕಾಂಶ ಆಹಾರಗಳ ಸಮಿತಿಗೆ ಸಹಾಯವನ್ನು ಒದಗಿಸತಕ್ಕದ್ದು..

ಐ. ಅನ್ವಯವಾಗುವ ಕಾಯಿದೆಗಳಡಿಯಲ್ಲಿ ಗ್ರಾಮ ಪಂಚಾಯತಿಗಳು, ಜಿಲ್ಲಾ ಮತ್ತು ರಾಜ್ಯ ಪ್ರಾಧಿಕಾರಗಳು ನಿರ್ದೇಶನ ನೀಡಬಹುದಾದ ಇತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಯ ನಿರ್ವಹಣೆ.

**18**. **ಸರ್ಕಾರೇತರ ಮತ್ತು ಸಮುದಾಯ –ಆಧಾರಿತ ಸಂಘಟನೆಗಳು** ಗ್ರಾಮ ಪಂಚಾಯತಿಯು ತ್ಯಾಜ್ಯ ಜಲ ನಿರ್ವಹಣೆಗೆ ಸಂಬಂಧಿಸಿದಂತೆ ಸರ್ಕಾರೇತರ ಮತ್ತು/ಅಥವಾ ಸಮುದಾಯ–ಆಧಾರಿತ ಸಂಘನೆಗಳಿಗೆ ಮತ್ತು ಸ್ವಸಹಾಯ ಸಮೂಹಗಳಿಗೆ ಕೆಳಕಂಡ ಪಾತ್ರಗಳನ್ನು ವಹಿಸಬಹುದು.

ಎ. ಇಡೀ ಸಮುದಾಯವನ್ನೇ ಒಳಗೊಳ್ಳುವ ವಿವಿಧ ತಿಳುವಳಿಕೆ, ಮೂಡಿಸುವ, ಮಾಹಿತಿ ಶೈಕ್ಷಣಿಕ ಮತ್ತು ನಡವಳಿಕೆಯಲ್ಲಿನ ಬದಲಾವಣೆಯ ಕಾರ್ಯಟವಟುವಟಿಕೆಗಳ ಯೋಜನೆ, ಪ್ರಸರಣೆ ಮತ್ತು ಅನುಷ್ಠಾನದದಲ್ಲಿ ಗ್ರಾಮ ಪಂಚಾಯತಿಗೆ ಬೆಂಬಲವನ್ನು ಒದಗಿಸತಕ್ಕದ್ದು.

ಬಿ. ಗ್ರಾಮ ಪಂಚಾಯತಿ ಸಿಬ್ಬಂದಿವರ್ಗ, ನೈರ್ಮಲ್ಯ ಪ್ರೇರಕರು, ಏಜೆನ್ಸಿಗಳು ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿ ಒಳಗೊಳ್ಳುವಂತಹ ಇನ್ನಿತರ ವ್ಯಕ್ತಿಗಳಿಗೆ ತರಬೇತಿ ಮತ್ತು ಸಾಮರ್ಥ್ಯ ವರ್ಧನೆಯಲ್ಲಿ ಒಳಗೊಳ್ಳುವಿಕೆ

ಸಿ. ನೈರ್ಮಲ್ಯ ಯೋಜನೆ ಮತ್ತಿತರ ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತಿಗೆ ಸಹಾಯವನ್ನು ಒದಗಿಸುವುದು.

ಡಿ. ಸರ್ವೇ ಕಾರ್ಯ ನಡೆಸತಕ್ಕದ್ದು ಮತ್ತು ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮದ ಪರಿಣಾಮಗಳ ಮೇಲ್ವಿಚಾರಣೆ ಮತ್ತು ತ್ಯಾಜ್ಯ ಜಲ ಸಂಸ್ಕರಣಾ ವ್ಯವಸ್ಥೆಗಳ ಸಾಮಾಜಿಕ ಮತ್ತು ಇತರ ಸ್ವತಂತ್ರ ಪರಿಶೋಧನೆಗಳಲ್ಲಿ ಸಹಾಯ ಒದಗಿಸತಕ್ಕದ್ದು.

ಇ. ಕಪ್ಪು ನೀರು ಮತ್ತು/ಅಥವಾ ಬೂದು ನೀರಿಗೆ ಸಂಬಂಧಿಸಿದಂತೆ ವಿಕೇಂದ್ರೀಕೃತ ಸಂಸ್ಕರಣಾ ವ್ಯವಸ್ಥೆಗಳ ವೃದ್ಧಿ

ಎಫ್.ಅನ್ವಯವಾಗುವ ಕಾಯಿದೆಗಳಡಿಯಲ್ಲಿ ಗ್ರಾಮ ಪಂಚಾಯತಿಗಳು, ಜಿಲ್ಲಾ ಮತ್ತು ರಾಜ್ಯ ಪ್ರಾಧಿಕಾರಗಳು ನಿರ್ದೇಶನ ನೀಡಬಹುದಾದ ಇತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಯ ನಿರ್ವಹಣೆ.

**19**. **ನೈರ್ಮಲ್ಯ ಉತ್ತೇಜಕರು** ಗ್ರಾಮ ಪಂಚಾಯತಿಗಳು ವಹಿಸಬಹುದಾದಂತೆ ನೈರ್ಮಲ್ಯ ಪ್ರೇರಕರು ಕೆಲಕಂಡ ಕರ್ತವ್ಯಗಳನ್ನು ಹೊಂದಿರತಕ್ಕದ್ದು.

ಎ. ಗ್ರಾಮ ಪಂಚಾಯತಿಯ ನೈರ್ಮಲ್ಯ ಯೋಜನೆ, ವಿಸ್ತೃತ ಯೋಜನಾ ವರದಿ ಮತ್ತಿತರ ತ್ಯಾಜ್ಯ ನಿರ್ವಹಣಾ ಯೋಜನೆಗಳ ತಯಾರಿಕೆಯಲ್ಲಿ ಗ್ರಾಮ ಪಂಚಾಯತಿಗೆ ಸೂಕ್ತ ಸಹಾಯವನ್ನು ಒದಗಿಸತಕ್ಕದ್ದು.

ಬಿ. ತ್ಯಾಜ್ಯ ನಿರ್ವಾಹಕರುಗಳು ವೈಯಕ್ತಿಕ ವಾಸದ ಮನೆಗಳ ಶೌಚಾಲಯಗಳನ್ನು ಬಳಕೆ ಮಾಡಿ ನಿರ್ವಹಿಸುವ ಕುರಿತು ನಡವಳಿಕೆಯಲ್ಲಿ ಮಾರ್ಪಾಡುಗಳನ್ನು ಮಾಡುವುದನ್ನು ಖಾತ್ರಿ ಪಡಿಸುವ ಸಲುವಾಗಿ ಪ್ರೋತ್ಸಾಹಕ ಏಜೆಂಟರುಗಳಾಗಿ ಕಾರ್ಯ ನಿರ್ವಹಿಸತಕ್ಕದ್ದು.ವಿವಿಧ ತಿಳುವಳಿಕೆ ಮೂಡಿಸುವ, ಮಾಹಿತಿ ಒದಗಿಸುವ, ಶೈಕ್ಷಣಿಕ ಮತ್ತು ಸಂವಹನ ಕಾರ್ಯಚಟುವಟಿಕೆಗಳ ಯೋಜನೆ, ಪ್ರಸರಣೆ ಮತ್ತು ಅನುಷ್ಠಾನದಲ್ಲಿ ಹಾಗೂ ಸ್ಥಿರ ನಡವಳಿಕೆಯ ಮಾರ್ಪಾಡುಗಳಿಗೆ ಅನುವು ಮಾಡಿಕೊಡಲು ಸಹಾಯ ಮಾಡತಕ್ಕದ್ದು.

ಸಿ. ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರುಗಳು ಮತ್ತು/ಅಥವಾ ಗ್ರಾಮೀಣ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕಾಂಶ ಆಹಾರ ಸಮಿತಿ, ಏಜೆನ್ಸಿಗಳು ಮತ್ತು ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಲ್ಲಿ ಒಳಗೊಂಡಿರುವಂತಹ ಇತರ ವ್ಯಕ್ತಿಗಳ ಸಬಲೀಕರಣ ಮತ್ತು ಸಾಮರ್ಥ್ಯ ವೃದ್ಧಿಗೆ ಅನುವು ಮಾಡಿಕೊಡತಕ್ಕದ್ದು.

ಡಿ. ತ್ಯಾಜ್ಯ ಜಲ ಸಂಸ್ಕರಣೆಗಾಗಿ ನಿರ್ಮಾಣ ಮಾಡಿರುವ ಮೂಲಭೂತ ಸೌಕರ್ಯಗಳು, ರೊಚ್ಚು ತೆರವುಗೊಳಿಸುವ ವಾಹನಗಳು ಮತ್ತು ಈ ಸಂಬಂಧ ಪಡೆಯುವಂತಹ ಇತರ ಆಸ್ತಿಗಳ ಗುಣಮಟ್ಟ ಕುರಿತ ಮೌಲ್ಯೀಕರಣ.

ಇ. ಸುರಕ್ಷಿತ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಗಾಗಿ ಸೃಜಿಸಿದಂತಹ ಆಸ್ತಿಗಳ ಯುಕ್ತ ಚಾಲನೆ ಮತ್ತು ನಿರ್ವಹಣೆ ಕುರಿತಂತೆ ತಿಳುವಳಿಕೆ ಮೂಡಿಸತಕ್ಕದ್ದು.

ಎಫ್.ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಮೇಲ್ವಿಚಾರಣಾ ಕಾರ್ಯಚಟುವಟಿಕೆಗಳಲ್ಲಿ ಸಹಾಯವನ್ನು ನೀಡುವ ಮೂಲಕ ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮದಲ್ಲಿ ಸ್ಥಿರತೆಯನ್ನು ಖಾತ್ರಿ ಪಡಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ದತ್ತಾಂಶಗಳ ದಾಖಲೆಗಳ ನಿರ್ವಹಣೆ.

ಜಿ. ಮಹಿಳೆಯರು ಮತ್ತು ಹದಿವಯಸ್ಕರ ಬಾಲಕಿಯರನ್ನು ಗಮನದಲ್ಲಿಟ್ಟುಕೊಂಡು ಸ್ಥಿರ ನೈರ್ಮಲ್ಯ ಉತ್ಪನ್ನಗಳ ಬಳಕೆಯ ಬಗ್ಗೆ ಸೂಕ್ತ ತಿಳುವಳಿಕೆಯನ್ನೂ ಒಳಗೊಂಡಂತೆ ಮಹಿಳೆಯರ ಋತುಚಕ್ರ ಸ್ವಚ್ಛತಾ ನಿರ್ವಹಣೆಯನ್ನು ಕೈ ಗೊಳ್ಳತಕ್ಕದ್ದು.

ಎಚ್.ಸರ್ವೇ ಕಾರ್ಯ ನಡೆಸತಕ್ಕದ್ದು ಮತ್ತು ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮದ ಪರಿಣಾಮಗಳ ಮೇಲ್ವಿಚಾರಣೆ ಮತ್ತು ತ್ಯಾಜ್ಯ ಜಲ ಸಂಸ್ಕರಣಾ ವ್ಯವಸ್ಥೆಗಳ ಸಾಮಾಜಿಕ ಮತ್ತು ಇತರ ಸ್ವತಂತ್ರ ಪರಿಶೋಧನೆಗಳಲ್ಲಿ ಸಹಾಯ ಒದಗಿಸತಕ್ಕದ್ದು

(ಐ) ಅನ್ವಯವಾಗುವ ಕಾಯಿದೆಗಳಡಿಯಲ್ಲಿ ಗ್ರಾಮ ಪಂಚಾಯತಿಗಳು, ಜಿಲ್ಲಾ ಮತ್ತು ರಾಜ್ಯ ಪ್ರಾಧಿಕಾರಗಳು ನಿರ್ದೇಶನ ನೀಡಬಹುದಾದ ಇತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಯ ನಿರ್ವಹಣೆ.

## ಅಧ್ಯಾಯ –VI

## ತ್ಯಾಜ್ಯ ನೀರು ನಿರ್ವಹಣಾ ವ್ಯವಸ್ಥೆಗಳ ಯೋಜನೆ ಮತ್ತು ಮೇಲ್ವಿಚಾರಣೆ

### 20. ದ್ರವ ತ್ಯಾಜ್ಯ ನಿರ್ವಹಣಾ ಯೋಜನೆ ಮತ್ತು ಆಯವ್ಯಯಗಳು

ಎ. ಗ್ರಾಮ ಪಂಚಾಯತಿಯು ವೈಯಕ್ತಿಕವಾಗಿ ಅಥವಾ ಒಂದು ಸಮೂಹವಾಗಿಯಾಗಲೀ, ಪಂಚ ವಾರ್ಷಿಕ ನೈರ್ಮಲ್ಯ ಯೋಜನೆಯನ್ನು ತಯಾರಿಸತಕ್ಕದ್ದು, ಮತ್ತು ಇದು ವಾರ್ಷಿಕ ಯೋಜನೆಗಳಾಗಿ ಗ್ರಾಮ ಪಂಚಾಯತಿಯ ಆಭಿವೃದ್ಧಿ ಯೋಜನೆಯ ಭಾಗವಾಗಿ ರಚಿಸತಕ್ಕದ್ದು.

ಬಿ. ಗ್ರಾಮ ಪಂಚಾಯತಿ ನೈರ್ಮಲ್ಯ ಯೋಜನೆಯು ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು.

i. ಗ್ರಾಮ ಪಂಚಾಯತಿಗಳು ಅನುಷ್ಠಾನ ಕಾಲಾವಧಿ ಮತ್ತು ವಾರ್ಷಿಕ ಮೈಲುಗಲ್ಲುಗಳನ್ನು ಸಾಧಿಸತಕ್ಕದ್ದು.

ii. ದ್ರವ ತ್ಯಾಜ್ಯ ನಿರ್ವಹಣೆಯೂ ಒಳಗೊಂಡಂತೆ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಆಸ್ತಿಗಳು ಮತ್ತು ಮೂಲಭೂತ ಸೌಕರ್ಯಗಳು.

iii. ವೆಚ್ಚಗಳನ್ನು ಭರಿಸಲು ಅನುದಾನದ ಮೂಲವನ್ನೂ ಒಳಗೊಂಡಂತೆ ಬಂಡವಾಳ ಮತ್ತು ಕಾರ್ಯಾಚರಣೆಯ ವೆಚ್ಚಗಳ ಸಂಬಂಧ ಅನುದಾನದ ಅವಶ್ಯಕತೆ

iv. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಮಾನದಂಡಗಳು

v. ಸಾಮರ್ಥ್ಯ ವೃದ್ಧಿ, ತಿಳುವಳಿಕೆ ಮತ್ತು ನಡವಳಿಕೆಗಳ ಬದಲಾವಣೆಯ ಕಾರ್ಯ ಚಟುವಟಿಕೆಗಳು; ಮತ್ತು

vi. ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ತಿಳಿಸುವಂತಹ ಇತರ ವಿವರಗಳು.

ಸಿ. ಗ್ರಾಮ ಪಂಚಾಯತಿಯು ಕುಡಿಯುವ ನೀರಿನ ಎಲ್ಲಾ ಮೂಲಗಳನ್ನು ಅವುಗಳು ಲಭ್ಯವಿರುವ ಸ್ಥಳ, ಅವುಗಳ ವಿಧಗಳು ಮತ್ತು ಪರಿಸ್ಥಿತಿ, ನೀರು ಪೂರೈಕೆ ಜಾಲದ ಹೊರ ಹರಿವು, ತ್ಯಾಜ್ಯ ಜಲದ ಉತ್ಪಾದಕರು, ಅಸ್ತಿತ್ವದಲ್ಲಿರುವ ನಿಯಂತ್ರಣಾ ವ್ಯವಸ್ಥೆಗಳು ಮತ್ತು ಅವುಗಳ ಸ್ಥಿತಿ, ಸಂಕಷ್ಟದಲ್ಲಿರುವ ಸಮುದಾಯಗಳು ಮತ್ತು ಭೂ ಬಳಕೆಯ ವಿಧಾನಗಳ ನಕ್ಷೆಗಾಗಿ ಒಂದು ಸರ್ವೆಯನ್ನು ನಡೆಸತಕ್ಕದ್ದು.

ಡಿ. ಗ್ರಾಮ ಪಂಚಾಯತಿಯು ನೈರ್ಮಲ್ಯ ರಹಿತ ಶೌಚಾಲಯಗಳ ಸರ್ವೆ ಕಾರ್ಯವನ್ನು ಈ ಉಪವಿಧಿಗಳನ್ನು ಅಳವಡಿಸಿಕೊಂಡ ಎರಡು ತಿಂಗಳುಗಳೊಳಗೆ ನಡೆಸತಕ್ಕದ್ದು.

ಇ. ಅಭಿವೃದ್ಧಿಯು ದಟ್ಟವಾಗಿರುವ ಗ್ರಾಮ ಪಂಚಾಯತಿಯಲ್ಲಿ, ಗ್ರಾಮ ಪಂಚಾಯತಿಯು ತ್ಯಾಜ್ಯ ನೀರು ಉತ್ಪಾದಕರ ಪಟ್ಟಿಯೊಂದನ್ನು ನಿರ್ವಹಿಸತಕ್ಕದ್ದು ಮತ್ತು ಅವುಗಳನ್ನು ಗೃಹೋತ್ಪಾದಿತ ಮತ್ತು ಗೃಹೋತ್ಪಾದಿತ ರಹಿತ ಉತ್ಪಾದಕರೆಂದು ಅವರುಗಳ ಕಾರ್ಯಚಟುವಟಿಕೆಯ ಆಧಾರದ ಮೇಲೆ ವರ್ಗೀಕರಿಸತಕ್ಕದ್ದು.

ಎಫ್. ಗ್ರಾಮ ಪಂಚಾಯತಿಯು ಭೌಗೋಳಿಕ ವ್ಯಾಪ್ತಿಯಲ್ಲಿ ಉತ್ಪಾದನೆಯಾದ ದ್ರವ ತ್ಯಾಜ್ಯ ನಿರ್ವಹಣೆ ಕುರಿತಂತೆ ಗ್ರಾಮ ಪಂಚಾಯತಿಯು ಅಭಿವೃದ್ಧಿಯ ದಟ್ಟತೆಯ ಆಧಾರದ ಮೇಲೆ ವಿವರವಾದ ಯೋಜನಾ ವರದಿಯನ್ನು ಸಿದ್ಧ ಪಡಿಸತಕ್ಕದ್ದು.ಅಂತಹ ವಿವರವಾದ ಯೋಜನಾ ವರದಿಗಳು ಕೆಳಕಂಡ ಅಂಶಗಳನ್ನು ಹೊಂದಿರತಕ್ಕದ್ದು.

i. ಅಗತ್ಯವಿರುವಲ್ಲಿ ಮುಚ್ಚಲಾಗಿರುವ ಮೇಲ್ಮೈ ಚರಂಡಿಗಳ ಉದ್ದ ಮತ್ತು ವ್ಯಾಪಿಸುವ ನಕ್ಷೆ.

ii. ನೀರು ಹರಿವ ಮಾರ್ಗದ ಉದ್ದ ಮತ್ತು ವ್ಯಾಪ್ತಿಯ ನಕ್ಷೆ, ಅನ್ವಯವಾಗಿರುವಲ್ಲಿ

iii. ಎಫ್‌ಎಸ್‌ಟಿಪಿ/ಎಸ್‌ಟಿಪಿಗಳ ವಿವರಗಳು, ಅನ್ವಯವಾಗುವಲ್ಲಿ

iv. ಬೂದು ನೀರು ಸಂಸ್ಕರಣಾ ವ್ಯವಸ್ಥೆಗಳ ವಿವರಗಳು, ಅನ್ವಯವಾಗುವಲ್ಲಿ

v. ಒಂದು ವೇಳೆ ಗ್ರಾಮ ಪಂಚಾಯತಿಯು ತನ್ನದೇ ಆದ ರೊಚ್ಚು ತೆರವು ಗೊಳಿಸುವ ಸೇವೆಯನ್ನು ಒದಗಿಸಲು ಅಪೇಕ್ಷಿಸಿದಲ್ಲಿ, ಪಡೆಯಬೇಕಾದ ರೊಚ್ಚು ತೆರವು ವಾಹನದ ವಿವರಗಳು.

vi. ಗ್ರಾಮ ಪಂಚಾಯತಿಯು ನಿರ್ಮಾಣ ಮಾಡಲು/ ಮಾರ್ಪಾಡು ಮಾಡಲು ಉದ್ದೇಶಿಸುರವ ವೈಯಕ್ತಿಕ ವಾಸದ ಮನೆಗಳ ಶೌಚಾಲಯಗಳ ವಿವರಗಳು

vii. ಗ್ರಾಮ ಪಂಚಾಯತಿಯು ನಿರ್ಮಿಸಲು ಉದ್ದೇಸಿಸಿರುವ ಸಮುದಾಯ ಶೌಚಾಲಯಗಳ ವಿವರಗಳು

viii. ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ತಿಳಿಸಬಹುದಾದಂತೆ ತ್ಯಾಜ್ಯ ನೀರು ನಿರ್ವಹಣೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಗತ್ಯವಿರುವ ಇನ್ನಿತರ ಮಾಹಿತಿಗಳು.

ಜಿ. ಗ್ರಾಮ ಪಂಚಾಯತಿಯು ಗ್ರಾಮ ಪಂಚಾಯತಿಯ ಅಭಿವೃದ್ಧಿ ಯೋಜನೆಯ ಭಾಗವಾಗಿ ವಾರ್ಷಿಕ ಆಯವ್ಯಯವನ್ನು ಸಿದ್ಧ ಪಡಿಸತಕ್ಕದ್ದು ಮತ್ತು ಇದರಲ್ಲಿ;

i ದ್ರವ ತ್ಯಾಜ್ಯ ಸಾಗಾಣಿಕೆ ಮತ್ತು ಸಂಸ್ಕರಣಾ ಮೂಲಭೂತ ಸೌಕರ್ಯಗಳು ಮತ್ತು ಸೌಲಭ್ಯಕ್ಕಾಗಿ ಅಗತ್ಯವಿರುವ ಬಂಡವಾಳ ವೆಚ್ಚ.

ii. ಸದರಿ ಸೌಲಭ್ಯಗಳನ್ನು ಚಾಲನೆ ಮಾಡಲು ಮತ್ತು ನಿರ್ವಹಿಸಲು ಅಗತ್ಯವಿರುವ ಆವರ್ತಕ ವೆಚ್ಚ ಮತ್ತು

iii. ತರಬೇತಿ, ಮಾಹಿತಿ ಶಿಕ್ಷಣ ಮತ್ತು ಸಂವಹನ, ನಡವಳಿಕೆಗಳಲ್ಲಿ ಬದಲಾವಣೆ ಮತ್ತು ತಿಳುವಳಿಕೆ ಮೂಡಿಸುವ ಕಾರ್ಯ ಚಟುವಟಿಕೆಗಳು ಒಳಗೊಂಡಂತೆ ಸಾಮರ್ಥ್ಯ ವೃದ್ಧಿಯಂತಹ ಕಾರ್ಯಚಟುವಟಿಕೆಗಳಿಗಾಗಿ ಕಾರ್ಯಕ್ರಮದ ವೆಚ್ಚಗಳು.

ಎಚ್. ಗ್ರಾಮ ಪಂಚಾಯತಿಯು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗಳೆರಡನ್ನೂ ಒಳಗೊಂಡಂತೆ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಕಾರ್ಯ ಚಟುವಟಿಕೆಗಳಿಗಾಗಿ ಒಂದು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯತಕ್ಕದ್ದು ಮತ್ತು ಅದರಲ್ಲಿ ವಸೂಲು ಮಾಡಲಾದ ದ್ರವ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕವನ್ನು , ಕೇಂದ್ರ ಮತ್ತು ರಾಜ್ಯಗಳಿಂದ ವಿವಿಧ ಯೋಜನೆಗಳಿಗೆ ಬರುವ ಅನುದಾನ ಮತ್ತು ನಿಧಿಗಳನ್ನು ಇದರಲ್ಲಿ ಠೇವಣಿ ಇರಿಸತಕ್ಕದ್ದು.

i. ಈ ಬ್ಯಾಂಕ್ ಖಾತೆಯ ನಿಧಿಯನ್ನು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕರ್ತವ್ಯಗಳನ್ನು ಪೂರ್ಣಗೊಳಿಸಲು ಮಾಡಲಾದ ವೆಚ್ಚವನ್ನು ಮಾತ್ರ ಇದರಲ್ಲಿ ಭರಿಸತಕ್ಕದ್ದು.

ii. ಈ ಬ್ಯಾಂಕ್ ಖಾತೆಯ ವಹಿವಾಟುಗಳನ್ನು ನಿಯತಕಾಲಿಕವಾಗಿ ಪರಿಶೋಧನೆಗೆ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ಅನ್ವಯವಾಗುವ ಕಾಯಿದೆಯಡಿಯಲ್ಲಿ ನಿರ್ಣಯಿಸಿದ ವಿಧಾನದಲ್ಲಿ ಒಳಪಡಿಸತಕ್ಕದ್ದು.

## 21. ಎಲ್‌ಡಬ್ಲ್ಯೂ ಎಂ ವ್ಯವಸ್ಥೆಗಳ ಮೇಲ್ವಿಚಾರಣೆ

ಅ. **ನಿಯತಕಾಲಿಕ ವರದಿಗಳು–** ಗ್ರಾಮ ಪಂಚಾಯತಿಯು ಅದರ ಭೌಗೋಳಿಕ ವ್ಯಾಪ್ತಿಯಲ್ಲಿನ ನಿಯತಕಾಲಿಕವಾಗಿ ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳ ಸ್ಥಿತಿ, ಪ್ರಗತಿ ಮತ್ತು ಕಾಯಾಚರಣೆಗಳ ವರದಿಯನ್ನು ನಿರ್ವಹಣಾಧಿಕಾರಿ, ಮುಖ್ಯ ನಿರ್ವಹಣಾಧಿಕಾರಿ ಮತ್ತು ರಾಜ್ಯ ಪ್ರಾಧಿಕಾರಗಳಿಗೆ ನಿಗದಿತ ನಮೂನೆಗಳಲ್ಲಿ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯಿಂದ ಹೊರಡಿಸಲಾದ ನಿರ್ದೇಶನದನ್ವಯ ಸಲ್ಲಿಸತಕ್ಕದ್ದು.

ಬಿ. **ಐಸಿಟಿಗಳ ಬಳಕೆ** ಗ್ರಾಮ ಪಂಚಾಯತಿಯು ವೆಬ್ ಆಧಾರಿತ ವೇದಿಕೆಗಳು, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಪರಿಣಾಮಕಾರಿ ಮೇಲ್ವಿಚಾರಣೆ, ವರದಿ ಮಾಡುವಿಕೆ ಮತ್ತು ನೈರ್ಮಲ್ಯ ಮತ್ತು ದ್ರವ ತ್ಯಾಜ್ಯದ ಪರಿಣಾಮಕಾರಿ ನಿರ್ವಹಣೆಗಾಗಿ ಗರಿಷ್ಟ ಮಟ್ಟದಲ್ಲಿ ಬಳಕೆ ಮಾಡಲು ಅಪೇಕ್ಷಿಸತಕ್ಕದ್ದು

ಸಿ. **ಪರಿಶೋಧನೆಗಳು**–ಸಾಮಾಜಿಕ ಪರಿಶೋಧನೆಯೂ ಒಳಗೊಂಡಂತೆ ಗ್ರಾಮ ಪಂಚಾಯತಿಯು ನೈರ್ಮಲ್ಯ ಯೋಜನೆ ಮತ್ತು ತ್ಯಾಜ್ಯ ಜಲ ನಿರ್ವಹಣಾ ವ್ಯವಸ್ಥೆಗಳನ್ನು ಸ್ವತಂತ್ರ ಮೂರನೆಯ ಪಕ್ಷಕಾರನಿಂದ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಮಾರ್ಗಸೂಚಿಗಳನ್ವಯ ಕೈಗೊಳ್ಳತಕ್ಕದ್ದು.

ಡಿ ಏಜೆನ್ಸಿಗಳ ಪರಿಶೀಲನೆ

i. ಗ್ರಾಮ ಪಂಚಾಯತಿ ಮತ್ತು/ಅಥವಾ ಸರ್ಕಾರವು ನಿಯಮಿತವಾಗಿ ಏಜೆನ್ಸಿಗಳ ಸೌಲಭ್ಯಗಳು ಮತ್ತು ಕಾಯಾಚರಣೆಗಳನ್ನು ಅವುಗಳು ಈ ಉಪವಿಧಿಗಳನ್ವಯ ಮತ್ತು ಇತರ ಅನ್ವಯವಾಗುವ ವಿನಿಯಮಗಳನ್ವಯ ಮಾಡಲಾಗಿದೆಯೆಂಬುದನ್ನು ಖಾತ್ರಿ ಪಡಿಸುವ ಉದ್ದೇಶಗಳಿಗಾಗಿ ಪರಿಶೀಲಿಸತಕ್ಕದ್ದು.

ii. ಒಂದು ವೇಳೆ ಯಾವುದೇ ಪಾಲನೆಯಾಗದಿದ್ದಲ್ಲಿ, ಗ್ರಾಮ ಪಂಚಾಯತಿ ಮತ್ತು /ಅಥವಾ ಸರ್ಕಾರವು ಅಂತಹ ತಪ್ಪಿತಸ್ಥ ಏಜೆನ್ಸಿಗಳ ವಿರುದ್ಧ ಪರಿಹಾರಾತ್ಮಕ ಕ್ರಮದ ನೋಟೀಸು ಒಳಗೊಂಡಂತೆ, ಲೈಸೆನ್ಸುಗಳ ರದ್ದತಿ, ಕಪ್ಪು ಪಟ್ಟಿಗೆ ಸೇರಿಸುವಿಕೆ, ಜುಲ್ಮಾನೆ ಹಾಗೂ ದಂಡನೆಯನ್ನು ಈ ಉಪವಿಧಿಗಳನ್ವಯ ವಿಧಿಸತಕ್ಕದ್ದು.

**ಇ. ನಿಯಮಿತ ತಪಾಸಣೆಗಳು ಮತ್ತು ವಿಸ್ತೃತ ಯೋಜನಾ ವರದಿ ಹಾಗೂ ಯೋಜನೆಯ ಪರಿಶೀಲನೆ**

i. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಗ್ರಾಮ ಪಂಚಾಯತಿಯಿಂದ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗಳು ಗ್ರಾಮಗಳ ವಿವಿಧ ಭಾಗಗಳಲ್ಲಿ ಅದರ ಮತ್ತಿತರ ಭೌಗೋಳಿಕ ವ್ಯಾಪ್ತಿ ಪ್ರದೇಶದಲ್ಲಿ ಈ ಉಪವಿಧಿಗಳ ವಿವಿಧ ಉಪಬಂಧಗಳ ಅನುಪಾಲನೆಯ ಮೇಲ್ವಿಚಾರಣೆಯನ್ನು ನಡೆಸಲು ತ್ಯಾಜ್ಯ ನೀರು ಉತ್ಪಾದನೆಯ ಕುರಿತ ನಿಯಮಿತ ತಪಾಸಣೆಯನ್ನು ಕೈಗೊಳ್ಳತಕ್ಕದ್ದು.

ii. ಅಂತಹ ಅಧಿಕಾರಿಗಳು ಅವಶ್ಯಕವೆಂದು ಪರಿಗಣಿಸುವಂತಹ ಅಂತಹ ಸಹಾಯವನ್ನು ಯಾವುದೇ ಸ್ಥಳದಲ್ಲಿ

ಎ. ಈ ಉಪವಿಧಿಗಳಡಿಯಲ್ಲಿ ಗ್ರಾಮ ಪಂಚಾಯತಿಯು ವಿಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಅಥವಾ

ಬಿ. ಈ ಉಪವಿಧಿಗಳ ಉಪಬಂಧಗಳ ಅನುಪಾಲನೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ ಪಡೆಯಲು, ಎಲ್ಲಾ ನ್ಯಾಯಸಮ್ಮತವಾದ ಸಮಯಗಳಲ್ಲಿ ಪ್ರವೇಶಿಸುವ ಹಕ್ಕನ್ನು ಹೊಂದಿರತಕ್ಕದ್ದು.

ಎಫ್. **ಪದನಾಮಿತ ಅಧಿಕಾರಿ–** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತಿತರ ಪ್ರಾಧೀಕೃತ **ಅಧಿಕಾರಿಗಳು ಕೆಳಕಂಡ ಜವಾಬ್ದಾರಿಗಳನ್ನು ಹೊಂದಿರತಕ್ಕದ್ದು.**

i. ತ್ಯಾಜ್ಯೋತ್ಪಾದಕರುಗಳ ಕುಂದುಕೊರತೆಗಳ ಪರಿಹಾರ ಮತ್ತು ಉಪ–ವಿಧಿಗಳನ್ನು ಅನುಷ್ಠಾನಗೊಳಿಸುವಲ್ಲಿ ಸುಧಾರಣೆಗಳ ಕುರಿತ ಸಲಹೆ ನೀಡತಕ್ಕದ್ದು.

ii. ಜುಲ್ಮಾನೆಗಳು, ಸ್ಥಳದಲ್ಲಿಯೇ ಜುಲ್ಮಾನೆಗಳು ಮತ್ತು ದಂಡನೆಗಳನ್ನು ವಿಧಿಸುವುದು

iii. ಬಳಕೆದಾರರ ಶುಲ್ಕಗಳ ಸಂಗ್ರಹಣೆ

iv. ಈ ಉಪವಿಧಿಗಳಡಿಯಲ್ಲಿ ನಿರ್ದಿಷ್ಟ ಪಡಿಸಲಾದ, ಮತ್ತು ಗ್ರಾಮ ಪಂಚಾಯತಿಗಳು ಈ ಉಪವಿಧಿಗಳನ್ವಯ, ಅಧಿನಿಯಮದನ್ವಯ ಮತ್ತು ಇತರ ಯಾವುದೇ ಅನ್ವಯವಾಗುವ ಕಾಯಿದೆಯನ್ವಯ ವಹಿಸಬಹುದಾದ ಅಥವಾ ಪ್ರತ್ಯಾಯೋಜಿಸಬಹುದಾದ ಅಂತಹ ಹೊಣೆಗಾರಿಕೆಗಳ ಅನುಷ್ಠಾನ

ಜಿ. **ಅಪಘಾತಗಳ ವರದಿ ಸಲ್ಲಿಸುವಿಕೆ –** ಒಂದು ವೇಳೆ ದ್ರವ ತ್ಯಾಜ್ಯ ಸಂಸ್ಕರಣ ಅಥವಾ ವಿಲೇವಾರಿ ಸೌಲಭ್ಯ ಕೇಂದ್ರ ಅಥವಾ ಭೂ ಭರ್ತಿ ಸ್ಥಳದಲ್ಲಿ ಯಾವುದೇ ಅಪಘಾತಗಳು ಸಂಭವಿಸಿದಲ್ಲಿ, ಸದರಿ ಸೌಲಭ್ಯದ ಪ್ರಭಾರವನ್ನು ಹೊಂದಿರುವಂತಹ ಅಧಿಕಾರಿಯು **ನಮೂನೆ –1ರಲ್ಲಿ** ಗ್ರಾಮ ಪಂಚಾಯತಿಗೆ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಯು ಪರಿಶೀಲಿಸತಕ್ಕದ್ದು ಮತ್ತು ಯಾವುದಾದರೂ ಸೂಚನೆಗಳಿದ್ದಲ್ಲಿ, ಸೌಲಭ್ಯದ ಪ್ರಭಾರಿ ಅಧಿಕಾರಿಗೆ ಹೊರಡಿಸತಕ್ಕದ್ದು.

# ಅಧ್ಯಾಯ –VII

## ತ್ಯಾಜ್ಯ ಜಲ ನಿರ್ವಹಣೆಗಾಗಿ ಬಳಕೆದಾರರ ಶುಲ್ಕ.

### 22. ಗ್ರಾಮ ಪಂಚಾಯತಿಗೆ ಸಂದಾಯದಾಯಕವಾದ ಬಳಕೆದಾರರ ಶುಲ್ಕಗಳಿಗೆ ಸಂಬಂಧಿಸಿದ ಉಪಬಂಧಗಳು

ಎ. ಗ್ರಾಮ ಪಂಚಾಯತಿಯು ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಯ ವತಿಯಿಂದ ಸಂಗ್ರಹಿಸಲಾದ ಬಳಕೆದಾರರ ಶುಲ್ಕವನ್ನೂ ಒಳಗೊಂಡಂತೆ ತನ್ನ ಸ್ವಂತ ನಿಧಿಯಿಂದ ಈ ಉಪವಿಧಿಗಳನ್ನು ಅಳವಡಿಸಿಕೊಂಡ ಮೂರು ವರ್ಷಗಳಲ್ಲಿ ಹೊಂದಿರತಕ್ಕದ್ದು.

ಬಿ. ಉತ್ಪಾದಕನು ಸ್ಥಳದಲ್ಲಿನ ನಿಯಂತ್ರಣಾ ವ್ಯವಸ್ಥೆಗಳನ್ನು ತೆರವು ಮಾಡುವ ಸಂಬಂಧ ರೊಚ್ಚು ತೆರವಿನ ಶುಲ್ಕವನ್ನು ಗ್ರಾಮ ಪಂಚಾಯತಿಗಾಗಲೀ ಅಥವಾ ಸಂದರ್ಭಾನುಸಾರ ಲೈಸೆನ್ಸು ಹೊಂದಿದ ಏಜೆನ್ಸಿಗಾಗಲಿ ಈ ಉಪವಿಧಿಗಳ ಅನುಸೂಚಿ 11ರನ್ವಯ ಪಾವತಿ ಮಾಡತಕ್ಕದ್ದು.

ಸಿ. ಬೂದು ನೀರಿನ ಸಂಸ್ಕರಣೆಯನ್ನು ವಿಕೇಂದ್ರೀಕರಿಸಿರುವಂತಹ ಮತ್ತು ಮಾನವ ತ್ಯಾಜ್ಯ ಸಂಸ್ಕರಣೆಗಾಗಿ ಎಫ್ಎಸ್‌ಟಿಪಿ ಸೌಲಭ್ಯಗಳನ್ನು ಹೊಂದಿರುವಂತಹ ಗ್ರಾಮ ಪಂಚಾಯತಿಯಲ್ಲಿ ಬಳಕೆದಾರರ ಶುಲ್ಕವು ಉತ್ಪಾದಕನಿಂದ ಮೇಲ್ಮೈ ಮುಚ್ಚಿರುವ ಚರಂಡಿಗಳ ನಿರ್ವಹಣೆಗಾಗಿ ಮತ್ತು ಸಂಸ್ಕರಣಾ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವು ಎಫ್ಎಸ್‌ಟಿಪಿ ಮತ್ತು ಬೂದು ನೀರು ಸಂಸ್ಕರಣಾ ವ್ಯವಸ್ಥೆಯನ್ನು ಒಳಗೊಂಡಂತೆ ಸಂದಾಯದಾಯಕವಾಗಿರತಕ್ಕದ್ದು.

ಡಿ. ಒಳಚರಂಡಿ ಜಾಲಗಳು ಮತ್ತು ಅಂತಹ ಒಳಚರಂಡಿಯು ಕೇಂದ್ರೀಕೃತ ಎಫ್ಎಸ್‌ಟಿಪಿ/ಎಸ್‌ಟಿಪಿಗೆ ಜೋಡಣೆಯಾಗಿರುವ ಗ್ರಾಮ ಪಂಚಾಯತಿಗಳಲ್ಲಿ ಉತ್ಪಾದಕನು ಆತನ ಆವರಣದಿಂದ ಬರುವ ತ್ಯಾಜ್ಯ ಹೊರಹರಿವನ್ನು ಒಳಚರಂಡಿ ಜಾಲಕ್ಕೆ ಜೋಡಿಸಿರುವ ಸಂಬಂಧ, ಒಂದು ಬಾರಿಯ ಶುಲ್ಕವನ್ನು ಹಾಗೂ ಯುಜಿಡಿ ಜಾಲದ ನಿರ್ವಹಣೆಗಾಗಿ ಹಾಗೂ ಸಂಸ್ಕರಣಾ ಸ್ಥಾವರದ ಕಾರ್ಯಾಚರಣೆ ಮತ್ತು ನಿರ್ವಹಣೆಯ ಬಳಕೆದಾರರ ಶುಲ್ಕವನ್ನು ಈ ಉಪವಿಧಿಗಳ ಅನುಸೂಚಿ 11ರಲ್ಲಿ ನಿರ್ದಿಷ್ಟ ಪಡಿಸಿರುವಂತಹ ಪಾವತಿ ಮಾಡತಕ್ಕದ್ದು.

ಇ. ಅನುಸೂಚಿ 11ರಲ್ಲಿ ನಿರ್ದಿಷ್ಟ ಪಡಿಸಿರುವ ಬಳಕೆದಾರರ ಶುಲ್ಕವು ಪ್ರತಿ ಮೂರು ವರ್ಷಗಳಿಗೊಮ್ಮೆ ಸ್ವಯಂಚಾಲಿತವಾಗಿ ಶೇ 5%ರಷ್ಟು (ಸಮೀಪದ ರೂ 10.00ಕ್ಕೆ ಪೂರ್ಣಾಂಕಗೊಳಿಸತಕ್ಕದ್ದು) ಅಂತಹ ವರ್ಷದ ಏಪ್ರಿಲ್ 1ರಿಂದ ಹೆಚ್ಚಳವಾಗತಕ್ಕದ್ದು. ಈ ದರಗಳನ್ನು ಗ್ರಾಮ ಪಂಚಾಯತಿಯ ಕಚೇರಿಯಲ್ಲಿ ಹಾಗೂ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಮತ್ತಿತರ ಕಣ್ಣಿಗೆ ಗೋಚರವಾಗುವ ಸ್ಥಳಗಳಲ್ಲಿ ಪ್ರಚಾರದ ಸಲುವಾಗಿ ಪ್ರದರ್ಶಿಸತಕ್ಕದ್ದು.

ಎಫ್. ಒಂದು ವೇಳೆ ಬಳಕೆದಾರರು ನೀರಿನ ಕರವನ್ನು ಪಾವತಿ ಮಾಡಬೇಕಾಗಿದ್ದಲ್ಲಿ, ಅದನ್ನು ನೀರಿನ ಕರದ ಬಿಲ್ಲಿನೊಂದಿಗೆ ಸೇರಿಸತಕ್ಕದ್ದು.

ಜಿ. ಬಳಕೆದಾರರ ಶುಲ್ಕವನ್ನು ಗ್ರಾಮಪಂದಾಯತಿಯಲ್ಲಿ ಖುದ್ದಾಗಿ ಮತ್ತು/ಅಥವಾ ಇತರ ಯಾವುದೇ ವಿಧಾನದಲ್ಲಿ ಗ್ರಾಮ ಪಂಚಾಯತಿಯು ನಿರ್ದಿಷ್ಟ ಪಡಿಸುವ ಯಾವುದೇ ದಿನದಂದು ಸಾಮಾನ್ಯವಾಗಿ ಪ್ರತಿ ತಿಂಗಳ ಮೊದಲನೆಯ ವಾರದಲ್ಲಿ ಗ್ರಾಮ ಪಂಚಾಯತಿ ಕಚೇರಿಯಲ್ಲಿ ವಸೂಲು ಮಾಡತಕ್ಕದ್ದು.

ಎಚ್.ಬಳಕೆ ದಾರರ ಶುಲ್ಕವನ್ನು ಗ್ರಾಮ ಪಂಚಾಯತಿಯು ಆಸ್ತಿ ತೆರಿಗೆಗೆ ಹಾಕುವ ಮೂಲಕ ಅಥವಾ ಲೈಸೆನ್ಸು ಶುಲ್ಕದ ರೂಪದಲ್ಲಿ ಅಧಿನಿಯಮದ ಉಪಬಂಧಗಳನ್ವಯ ಸಂಗ್ರಹಿಸಬಹುದು.

ಐ. ಗ್ರಾಮ ಪಂಚಾಯತಿಯು ಬಳಕೆದಾರರ ಶುಲ್ಕಕ್ಕೆ ಸಂಬಂಧಿಸಿದಂತೆ ಬಿಲ್ಲು ಮಾಡಲು, ಹಣ ಸಂಗ್ರಹಣೆ ಮಾಡಲು ಹೆಚ್ಚುವರಿ ತಾಂತ್ರಿಕತೆಯನ್ನು ಕಾಲಕಾಲಕ್ಕೆ ರೂಪಿಸಬಹುದು ಮತ್ತು ಇವುಗಳನ್ನು ಸಾಮಾನ್ಯ ಅಥವ ವಿಶೇಷ ಆದೇಶ/ಅಧಿಸೂಚನೆಯ ಮೂಲಕ ಅಧಿಸೂಚಿಸಬಹುದು.

ಜೆ. ಗ್ರಾಮ ಪಂಚಾಯತಿಯು ಸ್ವಯಂ ತಾನೇ ಆಗಲೀ ಅಥವಾ ಏಜೆನ್ಸಿಯ ಮೂಲಕವಾಗಲೀ ಬಳಕೆದಾರರ ಶುಲ್ಕವನ್ನು ವಿಧಿಸುವ ಉದ್ದೇಶಕ್ಕಾಗಿ ಎಲ್ಲಾ ಉತ್ಪಾದಕರ ದತ್ತಾಂಶವನ್ನು ಸಿದ್ಧ ಪಡಿಸತಕ್ಕದದು ಮತ್ತು ಈ ದತ್ತಾಂಶವನ್ನು ನಿಯಮಿತವಾಗಿ ಅಪ್‌ಡೇಟ್ ಮಾಡತಕ್ಕದ್ದು

ಕೆ. ಒಂದು ವೇಳೆ ಆರು ತಿಂಗಳಿಗೂ ಅಧಿಕ ಅವಧಿಗೆ ಬಳಕೆದಾರರ ಶುಲ್ಕವನ್ನು ಪಾವತಿ ಮಾಡಲು ವಿಫಲರಾದಲ್ಲಿ, ಗ್ರಾಮ ಪಂಚಾಯತಿ ಅಥವಾ ಇತರ ಯಾವುದೇ ಸಕ್ಷಮ ಪ್ರಾಧಿಕಾರವು ಅಂತಹ ಶುಲ್ಕ ಪಾವತಿ ಮಾಡಲು ವಿಫಲನಾಗುವ ವ್ಯಕ್ತಿಯಿಂದ ಸಂದರ್ಭಾನುಸಾರ ಅಧಿನಿಯಮದ ಉಪಬಂಧಗಳಡಿಯಲ್ಲಿ ತೆರಿಗೆಯೆಂಬಂತೆ ವಸೂಲು ಮಾಡತಕ್ಕದ್ದು.

ಎಲ್. ಅಂತಹ 'ಪಾವತಿ ಮಾಡಿರುವ ವ್ಯಕ್ತಿಯು ಬಳಕೆದಾರರ ಶುಲ್ಕವನ್ನು ಪಾವತಿ ಮಾಡುವವರೆಗೆ ಗ್ರಾಮ ಪಂಚಾಯತಿಯು ಪರಿಭಾವಿಸುವ ಅಂತಹ ಸೇವೆಗಳನ್ನು ಸಂದರ್ಭಾನುಸಾರ ಅಧಿನಿಯಮದ ಉಪಬಂಧಗಳಡಿಯಲ್ಲಿ ಸ್ಥಗಿತಗೊಳಿಸತಕ್ಕದ್ದು

ಎಂ. ಗ್ರಾಮ ಪಂಚಾಯತಿ ವತಿಯಿಂದ ಬಳಕೆದಾರರ ಶುಲ್ಕವೆಂದು ಸಂಗ್ರಹಿಸಲಾದ ಎಲ್ಲಾ ಮೊತ್ತಗಳನ್ನು ಸಹ ಈ ಉಪವಿಧಿಗಳಡಿಯಲ್ಲಿ ತ್ಯಾಜ್ಯ ಜಲ ನಿರ್ವಹಣಾ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ, ಸಿಬ್ಬಂದಿಗಳ ವೇತನ, ಮತ್ತಿತರ ತ್ಯಾಜ್ಯ ನಿರ್ವಹಣಾ ಸಂಬಂಧೀ ಕಾರ್ಯಚಟುವಟಿಕೆಗಳಿಗೆ ಯುಕ್ತವೆಂದು ಪರಿಗಣಿಸಿದಂತೆ ಗ್ರಾಮ ಪಂಚಾಯಿತಿಯು ಕಾಲಕಾಲಕ್ಕೆ ಬಳಕೆ ಮಾಡಿಕೊಳ್ಳತಕ್ಕದ್ದು.

# ಅಧ್ಯಾಯ –VIII

## ಈ ಉಪವಿಧಿಗಳಡಿಯಲ್ಲಿ ಅಪರಾಧಗಳು

### 23. ನಿರ್ದಿಷ್ಟ ಅಪರಾಧಗಳು

ಎ. ಯಾರೇ ಉತ್ಪಾದಕನು ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲೀ, ಆತನ/ ಆಕೆಯ ಆವರಣದಲ್ಲಿರುವ ಮಾನವ ತ್ಯಾಜ್ಯ ನಿಯಂತ್ರಣಾ ವ್ಯವಸ್ಥೆಯನ್ನು ಸ್ವಚ್ಛಗೊಳಿಸಲು ಅಥವಾ ತೆರವುಗೊಳಿಸಲು ಮಾನವ ಸ್ವಚ್ಛಗಾರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ಯಾರೇ ಉತ್ಪಾದಕನು ಈ ರೀತಿ ಮಾಡುತ್ತಿರುವುದು ಕಂಡು ಬಂದಲ್ಲಿ, ಅಂತಹ ವ್ಯಕ್ತಿಯು ಮಾನವ ಸ್ವಚ್ಛಗಾರರಾಗಿ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಆಧಿನಿಯಮ, 2013ರ ಉಪಬಂಧಗಳನ್ವಯ ದಂಡನೀಯನಾಗತಕ್ಕದ್ದು.

ಬಿ. ಯಾರೇ ವ್ಯಕ್ತಿಯು

i. ಆತನ/ಆಕೆಯ ಆವರಣದಿಂದ ಕೊಳಕು ನೀರು/ ಹೊಲಸು ರಾಡಿ/ಚರಂಡಿ ಹರಿವನ್ನು ನೀರಿನ ಹರಿವಿಗೆ, ರಸ್ತೆಗೆ, ಮುಕ್ತ ಪ್ರದೇಶಕ್ಕೆ, ನೀರಿನ ಮೂಲಗಳಿಗೆ, ಜಲಮಾರ್ಗ, ಕೃಷಿ ಭೂಮಿ ಅಥವಾ ಇತರ ಯಾವುದೇ ಮೀಸಲಿರದಂತಹ ಪ್ರದೇಶಕ್ಕೆ ಬಿಟ್ಟಲ್ಲಿ ಅಥವ ಬಿಡಲು ಪ್ರೇರಣೆ ನೀಡತಕ್ಕದ್ದಲ್ಲ.

ii. ನಿಯಂತ್ರಣಾ ವ್ಯವಸ್ಥೆಗಳನ್ನು ಸಾರ್ವಜನಿಕ ಚರಂಡಿ ಮಾರ್ಗಕ್ಕೆ ಗ್ರಾಮ ಪಂಚಾಯತಿಯಿಂದ ಅಗತ್ಯ ಅನುಮೋದನೆಯನ್ನು ಪಡೆಯದೆ ಮತ್ತು ಈ ಉಪವಿಧಿಗಳ ಗುಣಮಟ್ಟ ಮತ್ತು ನಿರ್ದಿಷ್ಟತೆಯಡಿಯಲ್ಲಿ ಜೋಡಣೆ ಮಾಡತಕ್ಕದ್ದಲ್ಲ.

iii. ಚರಂಡಿಗಳಿಗೆ ಹಾನಿ ಮಾಡಬಹುದಾದ ಯಾವುದೇ ವಸ್ತುವಿನ ಹರಿವಿಗೆ (ಮೇಲ್ಮೈ ಮುಚ್ಚಿದ ಚರಂಡಿಗಳು ಅಥವಾ ಒಳಚರಂಡಿಗಳು) ಅವಕಾಶ ನೀಡುವುದು ಅಥವಾ ದ್ರವ ತ್ಯಾಜ್ಯವು ಸಾರ್ವಜನಿಕ ಚರಂಡಿ ಮಾರ್ಗದಲ್ಲಿ ಅಥವಾ ಚರಂಡಿ ವ್ಯವಸ್ಥೆಯನ್ನು ನಾಶ ಪಡಿಸತಕ್ಕದ್ದಲ್ಲ.

iv. ಕಾನೂನು ಬಾಹಿರ ನಿರ್ಮಾಣಗಳ ಮೂಲಕ ಅಥವಾ ಒತ್ತುವರಿ ಮಾಡತಕ್ಕದ್ದಲ್ಲ.

v. ಕೈಗಾರಿಕಾ ಕೊಳಕು ನೀರನ್ನು ಅಥವಾ ಯಾವುದೇ ಕೈಗಾರಿಕಾ ಕಾರ್ಯಚಟುವಟಿಕೆಗಳಿಗೆ, ಗೃಹ ಕೈಗಾರಿಕೆಗಳು, ಕಸಾಯಿಖಾನೆಗಳು, ಹೈನುಗಾರಿಕೆ ಮತ್ತು ಜಾನುವಾರುಗಳ ಕೊಟ್ಟಿಗೆ, ಕಾರ್ಯಾಗಾರಗಳು ಮತ್ತು ಗರಾಜುಗಳಿಗೆ ನಿರ್ದಿಷ್ಟವಾದ ಇತರ ಯಾವುದೇ ಕೊಳಕು ನೀರನ್ನು ಸಾರ್ವಜನಿಕ ಚರಂಡಿಗಳು ಅಥವಾ ಜಲಮೂಲಗಳಿಗೆ ಅನ್ವಯವಾಗುವ ಕಾಯಿದೆಗಳಲ್ಲಿ ನಿರ್ದಿಷ್ಟ ಪಡಿಸಿರುವುದನ್ನು ಹೊರತು ಪಡಿಸಿ ಬಿಡತಕ್ಕದ್ದಲ್ಲ.

vi. ಜಲಮೂಲಗಳು ಒಳಗೊಂಡಂತೆ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಈ ಉದ್ದೇಶಗಳಿಗಾಗಿಯೇ ನಿರ್ದಿಷ್ಟವಾಗಿ ಒದಗಿಸಿರುವ ಅಂತಹ ಸಾರ್ವಜನಿಕ ಸೌಲಭ್ಯಗಳು ಅಥವಾ ಅನುಕೂಲತೆಗಳ ಸ್ಥಳಗಳನ್ನು ಹೊರತು ಪಡಿಸಿ ಉಗಿಯುವುದಾಗಲೀ ಅಥವಾ ಮೂತ್ರ ಅಥವಾ ಮಲವಿಸರ್ಜನೆ ಮಾಡುವುದಾಗಲೀ ಮಾಡತಕ್ಕದ್ದಲ್ಲ.

vii ಅನುಮತಿಯಿಲ್ಲದೆ ವಾಹನಗಳನ್ನೂ ಒಳಗೊಂಡಂತೆ ಮೇಲ್ಮೈ ಮುಚ್ಚಿದ ಚರಂಡಿಗಳು, ಆಳುಗುಂಡಿ ಮುಚ್ಚಳಗಳು, ಗ್ರಾಮ ಪಂಚಾಯತಿಯ ವತಿಯಿಂದಾಗಲೀ ಅಥವಾ ಈ ಉಪವಿಧಿಗಳಡಿಯಲ್ಲಿ ನೇಮಕ ಮಾಡಲಾದ ಯಾವುದೇ ಏಜೆನ್ಸಿಯಿಂದಾಗಲೀ ಒದಗಿಸಲಾಗಿರುವ ಚರಂಡಿಗಳು ಮತ್ತು ಉಪಕರಣಗಳನ್ನು ತೆರವುಗೊಳಿಸತಕ್ಕದ್ದಲ್ಲ ಅಥವಾ ಹಾನಿ ಮಾಡತಕ್ಕದ್ದಲ್ಲ.

# ಅಧ್ಯಾಯ – IX

## ದಂಡನೆಗಳು ಮತ್ತು ಕುಂದುಕೊರತೆಗಳ ನಿವಾರಣೆ

### 24. ದಂಡನೆಗಳು

ಎ. ಈ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಪಾಲನೆ ಮಾಡದಂತಹ ಯಾರೇ ವ್ಯಕ್ತಿಯು ಅನುಸೂಚಿ –111 ರಲ್ಲಿ ನಿಗದಿ ಪಡಿಸಿದ ಜುಲ್ಮಾನೆಯ ಶಿಕ್ಷೆಗೆ ದಂಡನೀಯನಾಗತಕ್ಕದ್ದು.

ಬಿ. ಎರಡನೆಯ ಬಾರಿಗೆ ಅಥವಾ ತದನಂತರದ ಉಲ್ಲಂಘನೆಯಾದಲಿ ಅಥವಾ ಅನುಪಾಲನೆ ಮಾಡದಿರುವಲ್ಲಿ ಅನುಸೂಚಿ– 111 ರಲ್ಲಿ ನಿಗದಿ ಪಡಿಸಿದ ದರದ ಜುಲ್ಮಾನೆಯ ದುಪ್ಪಟ್ಟು ಮೊತ್ತದ ಜುಲ್ಮಾನೆಯನ್ನು ವಿಧಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಯು ಹೊಂದಿರತಕ್ಕದ್ದು.

ಸಿ. ಒಂದು ವೇಳೆ ಮೂರನೆಯ ಬಾರಿಗೆ ಅಥವಾ ತದನಂತರದ ಉಲ್ಲಂಘನೆಯಾದಲ್ಲಿ ಅಥವಾ ಅನುಪಾಲನೆ ಮಾಡದಿದ್ದಲ್ಲಿ, ಅನುಸೂಚಿ 111ರಲ್ಲಿ ನಿಗದಿ ಪಡಿಸಿದ ದರದ ಜುಲ್ಮಾನೆಯ ಮೂರು ಪಟ್ಟು ಮೊತ್ತದ ಜುಲ್ಮಾನೆಯನ್ನು ವಿಧಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಯು ಹೊಂದಿರತಕ್ಕದ್ದು.

ಡಿ.ಒಂದು ವೇಳೆ ನಾಲ್ಕನೆಯ ಬಾರಿಗೆ ಅಥವಾ ತದನಂತರದ ಉಲ್ಲಂಘನೆಯಾದಲ್ಲಿ ಅಥವಾ ಅನುಪಾಲನೆಯಾಗದಿದ್ದಲ್ಲಿ, ಗ್ರಾಮ ಪಂಚಾಯತಿಯು

i. ಉತ್ಪಾದಕನು ಹೊಂದಿರುವಂತಹ (ಯಾವುದಾದರು ಇದ್ದಲ್ಲಿ)ವ್ಯಾಪಾರಿ ಲೈಸೆನ್ಸನ್ನು ರದ್ದುಪಡಿಸುವ; ಮತ್ತು/ಅಥವಾ

ii. ಅಧಿನಿಯಮದಲ್ಲಿ ಉಪಬಂಧಿಸಿರುವಂತೆ ವಿವಿಧ ಮಾದರಿಯ ದಂಡದ ಮೊತ್ತವನ್ನು ವಸೂಲು ಮಾಡುವ ಮತ್ತು/ಅಥವಾ

iii. ಗ್ರಾಮ ಪಂಚಾಯತಿಯು ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ನಿರ್ಣಯಿಸುವಂತಹ ಇತರ ಯಾವುದೇ ಯುಕ್ತ ಕ್ರಮವನ್ನು ಕೈ ಗೊಳ್ಳುವಅಧಿಕಾರವನ್ನು ಹೊಂದಿರತಕ್ಕದ್ದು.

ಇ. ಈ ಉಪ–ವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಯಾರೇ ವ್ಯಕ್ತಿಯು ಗ್ರಾಮ ಪಂಚಾಯತಿಯ ಚರಂಡಿ ವ್ಯವಸ್ಥೆಗೆ ಅನಧಿಕೃತ ಸಂಪರ್ಕವನ್ನು ಕಲ್ಪಿಸಿದಲ್ಲಿ, ಇತರ ಯಾವುದೇ ದಂಡ ಮತ್ತು ಅದೇ ದರದಲ್ಲಿ(ದಾಮಾಪ)ದರದಲ್ಲಿ (pro-rata) ಶೇ 50%ರಷ್ಟು ದಾಮಾಪ ದರವನ್ನು ಅನುಸೂಚಿ 111ರಲ್ಲಿ ನಮೂದಿಸಿರುವಂತೆ ಪಾವತಿ ಮಾಡಲು ದಂಡನೀಯನಾಗತಕ್ಕದ್ದು.

ಎಫ್. ಯಾರೇ ವ್ಯಕ್ತಿಯು ಈ ಉಪ–ವಿಧಿಗಳಡಿಯಲ್ಲಿ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ಸ್ಥಳದಲ್ಲಿಯೇ ದಂಡ ವಿಧಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಯು ಹೊಂದಿರತಕ್ಕದ್ದು. ಆದಾಗ್ಯೂ ಸಹ, ಅಂತಹ ಸ್ಥಳದಲ್ಲಿಯೇ ದಂಡ ವಿಧಿಸುವಿಕೆಯು ಅನುಸೂಚಿ 111ರಲ್ಲಿ ನಿಗದಿ ಪಡಿಸಿರುವ ದರವನ್ನು ಮೀರತಕ್ಕದ್ದಲ್ಲ.

ಜಿ. ಅನುಸೂಚಿ 111ರಲ್ಲಿ ನಮೂದಿಸಿರುವ ಜುಲ್ಮಾನೆ ಅಥವಾ ದಂಡದ ಮೊತ್ತವು ಸ್ವಯಂಚಾಲಿತವಾಗಿ ಪ್ರತಿ ವರ್ಷವೂ ಸಹ ಶೇ 10%ರಂತೆ (ಸಮೀಪದ ರೂ 10/–ಕ್ಕೆ ಪೂರ್ಣಾಂಕಗೊಳ್ಳತಕ್ಕದ್ದು) ಮುಂದಿನ ವರ್ಷದ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಹೆಚ್ಚಳವಾಗತಕ್ಕದ್ದು. ಇದರೊಂದಿಗೆ, ಗ್ರಾಮ ಪಂಚಾಯತಿಯು ಅನ್ವಯವಾಗುವ ಕಾಯಿದೆಗಳ ಮೇರೆಗೆ ಯವುದೇ ಸಮಯದಲ್ಲಿ ಈ ಉಪವಿಧಿಗಳ ಅನುಸೂಚಿ 111ರಲ್ಲಿ ನಿಗದಿ ಪಡಿಸಿರುವ ದಂಡವನ್ನು ಹೆಚ್ಚಿಸಬಹುದು.

i. ಗ್ರಾಮ ಪಂಚಾಯತಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ತನ್ನ ಯಾರೇ ಸಿಬ್ಬಂದಿ ಅಥವಾ ಲೈಸೆನ್ಸು ಹೊಂದಿದ ಏಜೆನ್ಸಿಯು ಮಾನವ ಸ್ವಚ್ಛಗಾರರನ್ನು ನೇಮಕ ಮಾಡಿರುವುದು ಅಥವಾ ಮಾನವ ಸ್ವಚ್ಛಗಾರರು ಕಾರ್ಯ ನಿರ್ವಹಿಸಲು ಅವಕಾಶ ನೀಡಿರುವುದು ಕಂಡು ಬಂದಲ್ಲಿ, ನಿಯಮಿತವಾಗದ ಸ್ಥಳಗಳಲ್ಲಿ ಕೊಳಕು ನೀರು/ರಾಡಿಯನ್ನು ಹರಿಯ ಬಿಟ್ಟಲ್ಲಿ, ನಿರ್ಲಕ್ಷದ ಕ್ರಿಯೆಗಳಲ್ಲಿ ತೊಡಗಿದಲ್ಲಿ ಮತ್ತು ಅದು ಸಂಸ್ಕರಣಾ ಸ್ಥಾವರಗಳ ಅಸಮರ್ಪಕ ಕಾರ್ಯಾಚರಣೆಯಲ್ಲಿ ಫಲಿತವಾದಲ್ಲಿ, ಅಥವಾ ಇನ್ನಿತರ ಯಾವುದೇ ಕ್ರಮಗಳಿಂದ ಈ ಉಪವಿಧಿಗಳ ಉಪಬಂಧಗಳು ಉಲ್ಲಂಘನೆಯಾದಲ್ಲಿ ಅಂತಹ ಸಿಬ್ಬಂದಿ ಮತ್ತು ಲೈಸೆನ್ಸು ಹೊಂದಿದ ಏಜೆನ್ಸಿಗಳ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.

ii. ಒಂದು ವೇಳೆ ಯಾವುದೇ ಏಜೆನ್ಸಿಯು ಈ ಉಪವಿಧಿಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಪಾಲನೆ ಮಾಡಲು ವಿಫಲವಾದಲ್ಲಿ, ಅಂತಹ ಏಜೆನ್ಸಿಯನ್ನು ಅದು ಉಪವಿಧಿಗಳ ಅಥವಾ ಅನ್ವಯವಾಗುವ ವಿನಿಯಮಗಳಡಿಯಲ್ಲಿ ಕೈಗೊಂಡಿರುವ ಯಾವುದೇ ಕರ್ತವ್ಯಗಳಿಂದ ತೆಗೆದು ಹಾಕುವ ಅಥವಾ ಲೈಸೆನ್ಸನ್ನು ರದ್ದುಪಡಿಸುವ ಅಥವಾ ಅಮಾನತ್ತಿನಲ್ಲಿರುವ ಅಧಿಕಾರವನ್ನು ಗ್ರಾಮ ಪಂಚಾಯತಿಯು ಹೊಂದಿರತಕ್ಕದ್ದು.

iii. ಗ್ರಾಮ ಪಂಚಾಯತಿಯು ಈ ಉಪವಿಧಿಗಳ ಯಾವುದೇ ಉಪಬಂಧದ ಉಲ್ಲಂಘನೆಗೆ ಸಂಬಂಧಿಸಿದಂತೆ ನಡಾವಳಿಗಳನ್ನು ಪ್ರಾರಂಭಿಸಬಹುದು ಮತ್ತು ಈ ಉಪವಿಧಿಗಳಡಿಯಲ್ಲಿನ ಕ್ರಮದೊಂದಿಗೆ ಅಧಿನಿಯಮ, ಪರಿಸರ(ಸಂರಕ್ಷಣಾ) ಅಧಿನಿಯಮ, 1986, ಭಾರತೀಯ ದಂಡ ಸಂಹಿತೆ, 1860, ಜಲ( ಮಾಲಿನ್ಯ ನಿರ್ಬಂಧ ಮತ್ತು ನಿಯಂತ್ರಣ) ಅಧಿನಿಯಮ, 1974, ವಾಯು(ಮಾಲಿನ್ಯ ನಿರ್ಬಂಧ ಮತ್ತು ನಿಯಂತ್ರಣ)ಅಧಿನಿಯಮ, 1981 ಮತ್ತು/ಅಥವಾ ಅನ್ವಯವಾಗುವ ಇತರ ಯಾವುದೇ ವಿನಿಯಮಗಳಡಿಯಲ್ಲಿ ಸಹ ಕ್ರಮ ವಹಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

iv. ಜುಲ್ಮಾನೆ(ದಂಡ)ಯಾಗಿ ಸಂಗ್ರಹಿಸಲಾದ ಎಲ್ಲಾ ಮೊತ್ತವನ್ನೂ ಸಹ ಈ ಉಪವಿಧಿಗಳಡಿಯಲ್ಲಿ ತ್ಯಾಜ್ಯ ನೀರು ನಿರ್ವಹಣಾ ಸೇವೆಗಳನ್ನು ಒದಗಿಸುವ ಉದ್ದೇಶಗಳಿಗಾಗಿ ಗ್ರಾಮ ಪಂಚಾಯತಿಯ ಕಾರ್ಯಾಚರಣೆ ಮತ್ತು ವೆಚ್ಚಕ್ಕಾಗಿ, ಸಿಬ್ಬಂದಿಗಳ ವೇತನ, ಬಹುಮಾನಗಳು, ಮತ್ತಿತರ ತ್ಯಾಜ್ಯ ನಿರ್ವಹಣಾ ಕಾರ್ಯ ಚಟುವಟಿಕೆಗಳಿಗೆ ಗ್ರಾಮ ಪಂಚಾಯತಿಯು ಕಾಲಕಾಲಕ್ಕೆ ಯುಕ್ತವೆಂದು ಪರಿಗಣಿಸಲಾಗುವ ಉಪಯೋಗಕ್ಕಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.

**25. ಕುಂದುಕೊರತೆಗಳ ನಿವಾರಣೆ**

ಎ. **ಗ್ರಾಮ** ಪಂಚಾಯತಿಯು ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆಯನ್ನು(ಗಳನ್ನು) ಈ ಉಪಬಂಧಗಳ ಉಲ್ಲಂಘನೆಯ ಸಂಬಂಧದ ದೂರುಗಳನ್ನು ನೊಂದಣಿ ಮಾಡುವ ಸಲುವಾಗಿ ಅಭಿವೃದ್ಧಿ ಪಡಿಸತಕ್ಕದ್ದು.

ಬಿ. ಈ ವ್ಯವಸ್ಥೆಗಳು ಪ್ರತಿಯೊಂದು ಗ್ರಾಮದಲ್ಲಿಯೂ ಮತ್ತು/ಅಥವಾ ಗ್ರಾಮ ಪಂಚಾಯತಿಯ ಕಚೇರಿಯಲ್ಲಿ ಒಂದು ದೂರು ಕೇಂದ್ರ, ಮೊಬೈಲ್ ಆಪ್ ಮತ್ತು/ಅಥವಾ ಸ್ಥಳೀಯ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮ ಪಂಚಾಯತಿಯು ಯುಕ್ತವೆಂದು ಪರಿಗಣಿಸುವಂತಹ ಇತರ ಯಾವುದೇ ಕಾರ್ಯತಂತ್ರವನ್ನು ಒಳಗೊಂಡಿರಬಹುದು.

ಸಿ. ಕುಂದುಕೊರತೆಗಳ ಅರ್ಜಿಯನ್ನು ಯಾರೇ ನಾಗರೀಕನು ಖುದ್ದಾಗಿ, ದೂರವಾಣಿ ಮೂಲಕ, ಮಿಂಚಂಚೆ, ವೆಬ್‌ಸೈಟ್, ಅಂಚೆ, ಮೊಬೈಲ್ ಆಪ್, ಮತ್ತು/ಅಥವಾ ಗ್ರಾಮ ಪಂಚಾಯತಿಯು ನಿರ್ಣಯಿಸಿದಂತಹ ಇತರ ಯಾವುದೇ ವಿಧಾನದಲ್ಲಿ ಸಲ್ಲಿಸಬಹುದು.

ಡಿ. ಗ್ರಾಮ ಪಂಚಾಯತಿಯು ಪ್ರತಿಯೊಂದು ಕುಂದುಕೊರತೆಯನ್ನೂ ಸಹ ಕಾಲಾವಧಿಯಲ್ಲಿ ಮತ್ತು ದಕ್ಷತೆಯಿಂದ ನಿವಾರಿಸುವುದನ್ನು ಖಾತ್ರಿ ಪಡಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸಹ ಅರ್ಜಿಯನ್ನು ಸಲ್ಲಿಸಿದ 15 ದಿವಸಗಳ ಅವಧಿಯನ್ನು ಮೀರತಕ್ಕದ್ದಲ್ಲ.

ಇ. ಗ್ರಾಮ ಪಂಚಾಯತಿಯು ಕುಂದುಕೊರತೆಗಳ ವಿಧ, ಪರಿಸರಾತ್ಮಕ ಮತ್ತು/ಅಥವಾ ಇತರ ಆರೋಗ್ಯ ಸಂಬಂಧಿ ಪರಿಣಾಮಗಳು, ಸಾರ್ವಜನಿಕರಿಗೆ ಉಂಟಾದ ಅನಾನುಕೂಲತೆ, ಸಂಬಂಧಿತ ಆರ್ಥಿಕ ವೆಚ್ಚಗಳು ಮತ್ತಿತರ ಯುಕ್ತ ಪರಿಗಣನೆಯನ್ನು ಕುಂದುಕೊರತೆಗೆ ಸಂಬಂಧಿಸಿದಂತೆ ಸೂಕ್ತ ನಿವಾರಣಾ ಕ್ರಮಗಳನ್ನು ವಹಿಸುವ ಸಂದರ್ಭದಲ್ಲಿ ಪರಿಗಣಿಸತಕ್ಕದ್ದು.

# ಅಧ್ಯಾಯ –X

## ಗ್ರಾಮ ಪಂಚಾಯತಿಯ ಇತರ ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳು

26. ಈ ಉಪವಿಧಿಗಳ ಇನ್ನಿತರ ಅಧ್ಯಾಯಗಳಲ್ಲಿ ನಿಗದಿ ಪಡಿಸಿರುವ ಜವಾಬ್ದಾರಿಗಳು ಮತ್ತು ಕರ್ತವ್ಯಗಳೊಂದಿಗೆ ಗ್ರಾಮ ಪಂಚಾಯತಿಯು ಕೆಳಕಂಡ ಕರ್ತವ್ಯಗಳನ್ನೂ ಸಹ ಹೊಂದಿರತಕ್ಕದ್ದು.

ಎ. **ಪ್ರಚಾರ ಮತ್ತು ನಾಗರೀಕ ಮಾಹಿತಿ ಸೇವೆಗಳು**–ಈ ಉಪವಿಧಿಗಳ ಉಪಬಂಧಗಳನ್ನು ನೈರ್ಮಲ್ಯ ಪ್ರೇರಕರು ಸಮುದಾಯ ಆಧಾರಿತ ಸಂಘಟನೆಗಳು, ಸಂಕೇತಗಳು, ಕರಪತ್ರಗಳು, ಬಾನುಲಿ, ವರ್ತಮಾನ ಪತ್ರಿಕೆಗಳ ಮೂಲಕ ಮತ್ತಿತರ ಯುಕ್ತ ಮಾರ್ಗಗಳ ಮೂಲಕ ಪ್ರಚಾರ ನೀಡುವುದು ಗ್ರಾಮ ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ನಿವಾಸಿಗಳು ವೈಯಕ್ತಿಕ ಮತ್ತು ಸಾರ್ವಜನಿಕ ಸ್ವಚ್ಛತೆಯನ್ನು ಕಾಪಾಡುವ, ಶೌಚಾಲಯಗಳ ಬಳಕೆ ಮತ್ತು ನಿರ್ವಹಣೆ, ಮಾನವ ತ್ಯಾಜ್ಯಗಳನ್ನು ಬಹಿರಂಗವಾಗಿ ಹೊರಬಿಡುವಿಕೆ, ವೈರಾಣು ಆಧಾರಿತ ರೋಗಗಳು, ಇನ್ನಿತರವುಗಳೊಂದಿಗೆ ಚರಂಡಿಗಳನ್ನು ಮುಚ್ಚುವ ಸಂಬಂಧದ ಕರ್ತವ್ಯಗಳ ಕುರಿತಾದ ತಿಳುವಳಿಕೆ ಮೂಡಿಸತಕ್ಕದ್ದು.

ಬಿ. **ಪರಾದರ್ಶಕತೆ ಮತ್ತು ಸಾರ್ವಜನಿಕ ನಿಲುಕುವಿಕೆ** – ಅತಿ ಹೆಚ್ಚಿನ ಮಟ್ಟದ ಪಾರದರ್ಶಕತೆ ಮತ್ತು ಸಾರ್ವಜನಿಕ ನಿಲುಕುವಿಕೆಯನ್ನು ಖಚಿತ ಪಡಿಸುವ ಸಲುವಾಗಿ, ಗ್ರಾಮ ಪಂಚಾಯತಿಯು ಕೆಳಕಂಡ ಮಾಹಿತಿಗಳು, ದತ್ತಾಂಶ ಮತ್ತು ವರದಿಗಳನ್ನು ಈ ಉಪವಿಧಿಗಳಡಿಯಲ್ಲಿನ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಅದರ ಕಲಸದ ವೇಳೆಯಲ್ಲಿ ಒದಗಿಸತಕ್ಕದ್ದು.

i. ಈ ಉಪಬಂಧಗಳಡಿಯಲ್ಲಿ ನಿರ್ದಿಷ್ಟ ಪಡಿಸಲಾದ ಗ್ರಾಮ ಪಂಚಾಯತಿಯ ಹೊಣೆಗಾರಿಕೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುವ ಅಧಿಕಾರಿಯ ಹೆಸರು ಮತ್ತು ಸಂಪರ್ಕಗಳು

ii. ಗ್ರಾಮ ಪಂಚಾಯತಿಯಲ್ಲಿ ಅಸ್ತಿತ್ವದಲ್ಲಿರುವ ವೈಯಕ್ತಿಕ ವಾಸದ ಮನೆಗಳ ಶೌಚಾಲಯಗಳು ಮತ್ತು ಸಮುದಾಯ ಶೌಚಾಲಯಗಳ ಸಂಖ್ಯೆ ಕುರಿತಂತೆ ವಾರ್ಷಿಕ ದತ್ತಾಂಶ

iii. ದೂರುಗಳ ಮತ್ತು ದೂರುಗಳನ್ನು ನಿವಾರಿಸಲು ಗ್ರಾಮಪಂಚಾಯಿತಿಯು ಕೈಗೊಂಡ ಕ್ರಮಗಳ ಕುರಿತ ಅಂಕಿ ಅಂಶಗಳು.

iv. ಗ್ರಾಮ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯ ಪರವಾಗಿ ಸಂಗ್ರಹಿಸಲಾದ ಬಳಕೆದಾರರ ಶುಲ್ಕ ಮತ್ತು ದಂಡದ ಮೊತ್ತ ಮಾಸಿಕ ಆಧಾರದ ಮೇಲೆ ಈ ಮೊತ್ತಗಳನ್ನು ಬಳಕೆ ಮಾಡಲಾದ ವಿಧಾನ.

ಸಿ. **ಪ್ರೋತ್ಸಾಹಕಗಳ ಸೃಜನೆ**

i. ಗ್ರಾಮ ಪಂಚಾಯತಿಯು ಯಾವುದೇ ತ್ಯಾಜ್ಯ ನೀರಿನ ಸಂಸ್ಕರಣೆಯಿಂದಾದ ಉತ್ಪನ್ನಗಳ ಬಳಕೆಗೆ ಉತ್ತೇಜನ ನೀಡುವ ಸಲುವಾಗಿ ಪ್ರೋತ್ಸಾಹಕಗಳಿಗಾಗಿ ವ್ಯವಸ್ಥೆಗಳನ್ನು ಸೃಜಿಸುವ ಕುರಿತಂತೆ ಪರಿಗಣಿಸಬಹುದು.

ii. ಗ್ರಾಮ ಪಂಚಾಯತಿಯು ಘನೀಕೃತ ರೊಚ್ಚುಗಳನ್ನು ಅವಳಿಗುಂಡಿ ಶೌಚಾಲಯಗಳಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಸಲುವಾಗಿ ಖರೀದಿಸಲು ಸಂಸ್ಕರಿಸಲಾದ ನೀರನ್ನು ಸಂಸ್ಕರಣಾ ಸ್ಥಾವರಗಳಿಂದ ಬಳಕೆ ಮಾಡಿಕೊಳ್ಳಲು ಕೃಷಿಕರನ್ನು ಉತ್ತೇಜಿಸತಕ್ಕದ್ದು.

iii. ಗ್ರಾಮ ಪಂಚಾಯತಿಯು, ಲಭ್ಯವಿದ್ದಲ್ಲಿ, ಹೆಚ್ಚುವರಿ ಕಾಂಪೋಸ್ಟನ್ನು ಎಫ್‌ಎಸ್‌ಟಿಪಿ/ಎಸ್‌ಟಿಪಿಗಳಿಂದ ಗ್ರಾಮ ಪಂಚಾಯಿತಿಯು ಕಾಲಕಾಲಕ್ಕೆ ಅಧಿಸೂಚಿಸಿದಂತೆ ನಿರ್ದಿಷ್ಟ ದರಗಳಲ್ಲಿ ಅದರ ಸ್ವಂತ ಬಳಕೆಗಾಗಿ ಅಥವಾ ಲಾಭದಾಯಕ ಬೆಲೆಯಲ್ಲಿ ಮಾರಾಟಕ್ಕಾಗಿ ಖರೀದಿಸಬಹುದು.

**ಡಿ. ತರಬೇತಿ ಮತ್ತು ಸಾರ್ವಜನಿಕ ತಿಳುವಳಿಕೆ**

i. ಗ್ರಾಮ ಪಂಚಾಯತಿಯು ಸ್ವಯಂ ತಾನೇ ಆಗಲೀ ಮತ್ತು ಕ್ಷೇತ್ರದ ತಜ್ಞರಿಂದ ತ್ಯಾಜ್ಯ ನೀರು ನಿರ್ವಹಣೆ, ಸುರಕ್ಷಿತ ನೈರ್ಮಲ್ಯ ಕ್ರಮಗಳು, ಕುಂದುಕೊರತೆಗಳ ನಿವಾರಣಾ ಕಾರ್ಯತಂತ್ರಗಳ ಕುರಿತಂತೆ ತಿಳುವಳಿಕೆ ಮೂಡಿಸುವ ಮತ್ತು ಪರಿಣಾಮಕಾರಿ ಕಾರ್ಯಕ್ರಮಗಳನ್ನು ಆಯೋಜಿಸಬಹುದು.

ii. ಗ್ರಾಮ ಪಂಚಾಯತಿಯು ವೈಯಕ್ತಿಕ ವಾಸದ ಮನೆಗಳಲ್ಲಿ ಶೌಚಾಲಯಗಳ ನಿಯಮಿತ ಬಳಕೆ ಮತ್ತು ನಿರ್ವಹಣೆ, ಉತ್ಪಾದಕನ ಆವರಣದೊಳಗೆ ಸಾಧ್ಯವಾದ ಮಟ್ಟಿಗೆ ಸ್ಥಳದಲ್ಲಿಯೇ ಬೂದು ನೀರಿನ ಸಂಸ್ಕರಣೆಗಳನ್ನು ಉತ್ತೇಜಿಸುವ ಸಲುವಾಗಿ ಸೂಕ್ತ ಶ್ರಮವನ್ನು ವಹಿಸತಕ್ಕದ್ದು.

iii. ಗ್ರಾಮ ಪಂಚಾಯತಿಗಳು ಕೇಂದ್ರಿಕೃತ ಮಾಹಿತಿ ಶಿಕ್ಷಣ ಮತ್ತು ಸಂವಹನ ಮತ್ತು ನಡವಳಿಕೆಗಳ ಬದಲಾವಣೆಯ ಸಂವಹನ ಕಾರ್ಯಕ್ರಮಗಳನ್ನು ಆರೋಗ್ಯಕರ ನೈರ್ಮಲ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವ ಗುರಿಯನ್ನು ಹೊಂದಿ ಮೇಸ್ತ್ರಿಗಳು ಮತ್ತು ಅಂತಹ ಸಿಬ್ಬಂದಿಗಳಿಗೆ ಶೌಚಾಲಯಗಳ ವಿನ್ಯಾಸಗಳಲ್ಲಿನ ದೋಷಗಳನ್ನು ಸರಿಪಡಿಸಿಕೊಳ್ಳುವ ಸಲುವಾಗಿ ತಾಂತ್ರಿಕ ತರಬೇತಿ ಹೊಂದಲು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಖಾತ್ರಿ ಪಡಿಸುವ ಸಲುವಾಗಿ ಉತ್ತೇಜನ ನೀಡತಕ್ಕದ್ದು ಮತ್ತು ಸಂಘಟಿಸತಕ್ಕದ್ದು.

v. ಗ್ರಾಮ ಪಂಚಾಯತಿಯು ನೈರ್ಮಲ್ಯ ರಹಿತ ಶೌಚಾಲಯಗಳ ಮಾರ್ಪಾಡು ಮಾಡುವ ಮತ್ತು ಇತರ ದುರಸ್ತಿ ಕ್ರಿಯೆಯಲ್ಲಿ ಪಾಲ್ಗೊಳ್ಳುವಂತಹ ಮೇಸ್ತ್ರಿಗಳು ಮತ್ತು ತಾಂತ್ರಿಕ ತಜ್ಞರಿಗೆ ಮಾರ್ಪಾಡು ಮಾಡುವಲ್ಲಿ ತಾಂತ್ರಿಕ ತರಬೇತಿ ಕಾರ್ಯಕ್ರಮಗಳಿಗಾಗಿ ಅನುದಾನವನ್ನು ಒದಗಿಸತಕ್ಕದ್ದು ಮತ್ತು ಸಂಘಟಿತಸತಕ್ಕದ್ದು.

## ಅಧ್ಯಾಯ – XI

### ಇತರೆ

27. **ಸರ್ಕಾರಿ ಸಂಸ್ಥೆಗಳೊಂದಿಗೆ ಸಮನ್ವಯ:** ಗ್ರಾಮ ಪಂಚಾಯತಿಯು ಇತರ ಸರ್ಕಾರಿ ಏಜೆನ್ಸಿಗಳು ಮತ್ತು ಪ್ರಾಧಿಕಾರಗಳೊಂದಿಗೆ, ಅಂತಹ ಸಂಸ್ಥೆಗಳ ಅಧಿಕಾರ ವ್ಯಾಪ್ತಿ ಪ್ರದೇಶಗಳಲ್ಲಿ ಅಥವಾ ಈ ಸಂಸ್ಥೆಗಳ ನಿಯಂತ್ರಣ ದಲ್ಲಿರುವ ಪ್ರದೇಶಗಳಲ್ಲಿ ಈ ಉಪವಿಧಿಗಳ ಪಾಲನೆಯನ್ನು ಖಾತ್ರಿ ಪಡಿಸುವ ಸಲುವಾಗಿ ಸಮನ್ವಯವನ್ನು ಸಾಧಿಸತಕ್ಕದ್ದು.

28. **ಅನುಷ್ಠಾನದ ಪರಿಶೀಲನೆ:** ಗ್ರಾಮ ಪಂಚಾಯತಿಯು ಈ ಉಪವಿಧಿಗಳ ಅನುಷ್ಠಾನವನ್ನು ಕನಿಷ್ಟ ವರ್ಷಕ್ಕೆ ಎರಡು ಬಾರಿ ಪರಿಶೀಲಿಸತಕ್ಕದ್ದು ಮತ್ತು ಇದನ್ನು ಅನುಷ್ಠಾನಗೊಳಿಸುವ ಸಲುವಾಗಿ ಅದರ ಗುರಿಯನ್ನು ಪೂರ್ಣಗೊಳಿಸುವುದನ್ನು ಖಾತ್ರಿ ಪಡಿಸಲು ಯುಕ್ತ ಕ್ರಮವನ್ನು ಕೈಗೊಳ್ಳತಕ್ಕದ್ದು.

29. **ತಿದ್ದುಪಡಿಗಳು-** ಗ್ರಾಮಪಂಚಾಯತಿಗಳು, ಅಧಿನಿಯಮದ ಯುಕ್ತ ವಿಧಿವಿಧಾನಗಳನ್ನು ಅನುಸರಿಸಿ, ಆ ರೀತಿ ಮಾಡುವುದು ಅನಿವಾರ್ಯವಾದಲ್ಲಿ, ಸರ್ಕಾರದ ಪೂರ್ವಾನುಮತಿಯೊಂದಿಗೆ ಈ ಉಪವಿಧಿಗಳನ್ನು ತಿದ್ದುಪಡಿ ಮಾಡಬಹುದು ಮತ್ತು ಅದಕ್ಕೆ ಸೇರ್ಪಡೆ ಮಾಡಬಹುದು.

30. **ಆದೇಶಗಳ ನಿರಸನ ಮತ್ತು ಉಳಿಸುವಿಕೆ**

ಎ. ಈ ಉಪವಿಧಿಗಳು ಜಾರಿಗೆ ಬಂದ ತರುವಾಯ, ಅನ್ವಯವಾಗುವಂತಹ ನಿಯಮಗಳು/ವಿನಿಯಮಗಳನ್ವಯ ಯಾವುದೇ ಕ್ರಮವನ್ನು, ಅಂತಹ ಕ್ರಮಗಳು ಈ ಉಪವಿಧಿಗಳನ್ನು ಉಲ್ಲಂಘಿಸದ ಹೊರತು ಕೈಗೊಳ್ಳಬಹುದು.

31. **ವ್ಯಾಖ್ಯಾನ** ಈ ಉಪವಿಧಿಗಳ ಯಾವುದೇ ಖಂಡ ಅಥವಾ ಶಬ್ದಗಳ ವ್ಯಾಖ್ಯಾನದಲ್ಲಿ ಯಾವುದೇ ವ್ಯತ್ಯಾಸಗಳು ಉದ್ಭವಿಸಿದ ಸಂದರ್ಭದಲ್ಲಿ, ಇಂಗ್ಲೀಷ್ಆವೃತ್ತಿಯನ್ವಯ ಸದರಿ ವ್ಯಾಖ್ಯಾನವು ಅಂತಿಮವಾಗಿರತಕ್ಕದ್ದು ಮತ್ತು ಅದು ಕನ್ನಡ ಆವೃತ್ತಿಯನ್ನು(ಭಾಷಾಂತರ)ಅಧಿಕ್ರಮಿಸತಕ್ಕದ್ದು.

*******

## ಅನುಸೂಚಿ –1

## ಉತ್ಪಾದಕರು ಮತ್ತು ಅವರುಗಳ ವರ್ಗಗಳ ಪಟ್ಟಿ.

**ಗೃಹೋತ್ಪಾದಕರು**

1. ವಾಸದ ಉದ್ದೇಶಗಳಿಗಾಗಿ ಮಾತ್ರ ಬಳಕೆ ಮಾಡಲಾಗುವ ಆವರಣಗಳು

2.ಸಹಕಾರಿ ಆಧಾರದ ಮೇಲೆ ನಡೆಸಲಾಗುತ್ತಿರುವ ವಿದ್ಯಾರ್ಥಿ ನಿಲಯಗಳು ಒಳಗೊಂಡಂತೆ ಶಿಕ್ಷಣ ಸಂಸ್ಥೆಗಳ ವತಿಯಿಂದ ವಿದ್ಯಾರ್ಥಿಗಳಿಗಾಗಿ ನಡೆಸಲಾಗುತ್ತಿರುವ ವಿದ್ಯಾರ್ಥಿ ನಿಲಯಗಳ ಆವರಣಗಳು

3.ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಶಾಸನಬದ್ಧ ಸಂಸ್ಥೆಗಳಿಗೆ ಸೇರಿರುವಂತಹ ಮತ್ತು ಸಂಪೂರ್ಣವಾಗಿ ವಾಸದ ಉದ್ದೇಶಗಳಿಗಾಗಿ ಬಳಸಲಾಗುತ್ತಿರುವ ಆವರಣಗಳು

4.ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸೇರಿರುವಂತಹ ಮತ್ತು ಸಂಪೂರ್ಣವಾಗಿ ಸರ್ಕಾರಿ ನೌಕರರುಗಳ ವಾಸದ ವಸತಿಗೃಹಗಳಿಗಾಗಿ ಬಳಕೆ ಮಾಡಲಾಗುತ್ತಿರುವ ಆವರಣಗಳು

5.ಕಡು ಬಡವರ ವಾಸಕ್ಕಾಗಿ ಶುಲ್ಕರಹಿತವಾಗಿ ಬಳಕೆ ಮಾಡಲಾಗುವ, ಅಥವಾ ಒಂದು ವೇಳೆ ಶುಲ್ಕವನ್ನು ವಿಧಿಸಿದಾಗ್ಯೂ ಸಹ, ಯಾವುದೇ ಲಾಭವನ್ನು ಗಳಿಸದ ಸ್ವಾಧೀನಾನುಭವಕ್ಕಾಗಿಯೇ ಮಾಡಲಾಗಿರುವ ಧರ್ಮಶಾಲೆಗಳು ಮತ್ತು ಮುಸಾಫಿರ್ ಖಾನಾಗಳ ಆವರಣಗಳು.

6. ಔಷಧಾಲಯಗಳು ಮತ್ತು ನೈರ್ಮಲ್ಯ ಆಶ್ರಯತಾಣಗಳು (Sanitorial asylums)

**ಇತರ ಎಲ್ಲಾ ತ್ಯಾಜ್ಯೋತ್ಪಾದಕರನ್ನು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಒಂದು ಸೂಕ್ತ ಅಧಿಸೂಚನೆಯನ್ನು ಹೊರಡಿಸಿ ಅವರುಗಳನ್ನು ಗೃಹೋತ್ಪಾದಕರು ಎಂಬ ವರ್ಗೀಕರಿಸದ ಹೊರತು ಅವರುಗಳನ್ನು ಗೃಹೋತ್ಪಾದಕೇತರರು ಎಂದು ಪರಿಗಣಿಸತಕ್ಕದ್ದು.**

-------

## ಅನುಸೂಚಿ –11

ರೊಚ್ಚು ತೆರವಿನ ಶುಲ್ಕಗಳು ಮತ್ತು ಬಳಕೆದಾರರ ಶುಲ್ಕಗಳು. ಈ ಶುಲ್ಕಗಳು ಕೇವಲ ಸೂಚನಾತ್ಮಕಗಳು. ಗ್ರಾಮ ಪಂಚಾಯತಿ ಮತ್ತು ಸಮೂಹವು ಸೂಚಿಸಿರುವುದಕ್ಕಿಂತ ಕಡಿಮೆ ಯಿಲ್ಲದಂತೆ ಅನ್ವಯವಾಗುವ ಶುಲ್ಕಗಳನ್ನು ನಿರ್ಣಯಿಸತಕ್ಕದ್ದು.

1. **ರೊಚ್ಚು ತೆರವುಗೊಳಿಸುವ ಶುಲ್ಕಗಳು**(ರೊಚ್ಚು ತೆರವು ಸೇವೆಯನ್ನು ಒದಗಿಸುತ್ತಿರುವ ಗ್ರಾಮ ಪಂಚಾಯತಿ ಅಥವಾ ಏಜೆನ್ಸಿಗೆ ಪಾವತಿ ಮಾಡತಕ್ಕದ್ದು)

| ಉತ್ಪಾದಕರ ವರ್ಗ | ಸ್ಥಳ | ರೊಚ್ಚು ತೆರವು ಶುಲ್ಕ (ರೂಪಾಯಿಗಳಲ್ಲಿ) |
|---|---|---|
| ಗೃಹೋತ್ಪಾದಕರು | ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ರೊಚ್ಚು ತರವಿನ ವಾಹನದ ಲಭ್ಯತೆ | 1000 |
| ಗೃಹೋತ್ಪಾದಕರು | ತಾಲ್ಲೂಕು ಮಟ್ಟದಲ್ಲಿ ರೊಚ್ಚು ತೆರವುಗೊಳಿಸುವ ವಾಹನದ ಲಭ್ಯತೆ | 1500 |
| ಗೃಹೋತ್ಪಾದಕೇತರರು | ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ರೊಚ್ಚು ತರವಿನ ವಾಹನದ ಲಭ್ಯತೆ | 2500 |
| ಗೃಹೋತ್ಪಾದಕೇತರರು | ತಾಲ್ಲೂಕು ಮಟ್ಟದಲ್ಲಿ ರೊಚ್ಚು ತೆರವುಗೊಳಿಸುವ ವಾಹನದ ಲಭ್ಯತೆ | 3000 |

ರೊಚ್ಚಿನ ಪ್ರಮಾಣ ಮತ್ತು ದೂರವನ್ನು ಅವಲಂಬಿಸಿ ಈ ಶುಲ್ಕಗಳಲ್ಲಿ ವ್ಯತ್ಯಾಸವುಂಟಾಗಬಹುದು.

2. ವಿಕೇಂದ್ರೀಕೃತ ಸಂಸ್ಕರಣಾ ವ್ಯವಸ್ಥೆಗೆ ಬಳಕೆದಾರರ ಶುಲ್ಕ(ಗ್ರಾಮ ಪಂಚಾಯತಿಗೆ ಚರಂಡಿಗಳು ಮತ್ತು ಎಫ್ಎಸ್‌ಟಿಪಿಯ ಓ ಮತ್ತು ಎಂ ಮತ್ತು ಬೂದು ನೀರು ಸಂಸ್ಕರಣಾ ವ್ಯವಸ್ಥೆಯ ನಿರ್ವಹಣೆಗಾಗಿ ಪಾವತಿ ಮಾಡತಕ್ಕದ್ದು)

| ಉತ್ಪಾದಕರ ವರ್ಗ | ಮಾಸಿಕ ಬಳಕೆದಾರರ ಶುಲ್ಕ ( ರೂಪಾಯಿಗಳಲ್ಲಿ) |
|---|---|
| ಗೃಹೋತ್ಪಾದಕರು (ಸ್ವಂತ ಜಲಮೂಲವನ್ನು ಹೊಂದಿರುವವರು) | 10 |
| ಗೃಹೋತ್ಪಾದಕರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು) | ನೀರಿನ ಬಲ್ಲಿನ ದರದ ಶೇ 20 % ರಷ್ಟು ಅಥವಾ 10, ಇದರಲ್ಲಿ ಯಾವುದು ಅಧಿಕವೋ ಅದು |
| ಗೃಹೋತ್ಪಾದಕರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು + ಸ್ವಂತ ಜಲಮೂಲವನ್ನು ಹೊಂದಿರುವವರು) | ನೀರಿನ ಬಿಲ್ಲಿನ ದರದ ಶೇ 20% +10 |
| ಗೃಹೋತ್ಪಾದಕೇತರರು (ಸ್ವಂತ ಜಲಮೂಲವನ್ನು ಹೊಂದಿರುವವರು) | 250 |
| ಗೃಹೋತ್ಪಾದಕೇತರರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರ ಕೊಳಾಯಿ ನೀರನ್ನು ಬಳಕೆ ಮಾಡುವವರು) | ಶೇ 25%ರಷ್ಟು ನೀರಿನ ಬಿಲ್ಲಿನ ದರ |
| ಗೃಹೋತ್ಪಾದಕೇತರರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ' ಕೊಳಾಯಿ ನೀರನ್ನು ಬಲಕೆ ಮಾಡುವವರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರ ಕೊಳಾಯಿ ನೀರನ್ನು ಬಳಕೆ ಮಾಡುವವರು + ಸ್ವಂತ ಜಲಮೂಲವನ್ನು ಹೊಂದಿರುವವರು) | ಶೇ 25%ರಷ್ಟು ನೀರಿನ ಬಿಲ್ಲಿನ ದರ + 250 |

3. **ಕೇಂದ್ರೀಕೃತ ಸಂಸ್ಕರಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಬಳಕೆದಾರರ ಶುಲ್ಕ**(ಗ್ರಾಮ ಪಂಚಾಯತಿಗೆ ಯುಜಿಡಿ, ಯುಜಿಡಿಯ ನಿರ್ವಹಣೆ, ಎಸ್ ಟಿಪಿಯ ಒ ಮತ್ತು ಎಂಗೆ ಪಾವತಿ ಮಾಡತಕ್ಕದ್ದು)

One time fee for connection to UGD

| **ಉತ್ಪಾದಕರ ವರ್ಗ** | **ಒಂದು ಬಾರಿಯ ಜೋಡಣೆ ಶುಲ್ಕ (ರೂಪಾಯಿಗಳಲ್ಲಿ)** |
|---|---|
| ಗೃಹೋತ್ಪಾದಕರು(ಸ್ವಂತ ಜಲಮೂಲವನ್ನು ಹೊಂದಿರುವವರು) | 500 |
| ಗೃಹೋತ್ಪಾದಕರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರ ಕೊಳಾಯಿ ನೀರನ್ನು ಬಳಕೆ ಮಾಡುವವರು) | 1000 |
| ಗೃಹೋತ್ಪಾದಕರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರ ಕೊಳಾಯಿ ನೀರನ್ನು ಬಳಕೆ ಮಾಡುವವರು + ಸ್ವಂತ ಜಲಮೂಲವನ್ನು ಹೊಂದಿರುವವರು) | 1500 |
| ಗೃಹೋತ್ಪಾದಕೇತರರು (ಸ್ವಂತ ಜಲಮೂಲವನ್ನು ಹೊಂದಿರುವವರು) | 1000 |
| ಗೃಹೋತ್ಪಾದಕೇತರರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರ ಕೊಳಾಯಿ ನೀರನ್ನು ಬಳಕೆ ಮಾಡುವವರು) | 1500 |
| ಗೃಹೋತ್ಪಾದಕೇತರರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು + ಸ್ವಂತ ಜಲಮೂಲವನ್ನು ಹೊಂದಿರುವವರು) | 2500 |

**ಬಳಕೆದಾರರ ಶುಲ್ಕಗಳು**

| **ಉತ್ಪಾದಕರ ವರ್ಗ** | **ಒಂದು ಬಾರಿಯ ಜೋಡಣೆ ಶುಲ್ಕ (ರೂಪಾಯಿಗಳಲ್ಲಿ)** |
|---|---|
| ಗೃಹೋತ್ಪಾದಕರು (ಸ್ವಂತ ಜಲಮೂಲವನ್ನು ಹೊಂದಿರುವವರು) | 30 |
| ಗೃಹೋತ್ಪಾದಕರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು) | ನೀರಿನ ಬಿಲ್ಲಿನ ಶೇ 25% |
| ಗೃಹೋತ್ಪಾದಕರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು + ಸ್ವಂತ ಜಲಮೂಲವನ್ನು ಹೊಂದಿರುವವರು) | ನೀರಿನ ಬಿಲ್ಲಿನ ಶೇ 25% + 30 |
| ಗೃಹೋತ್ಪಾದಕೇತರರು (ಸ್ವಂತ ಜಲಮೂಲವನ್ನು ಹೊಂದಿರುವವರು) | 500 |
| ಗೃಹೋತ್ಪಾದಕೇತರರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು) | ನೀರಿನ ಬಿಲ್ಲಿನ ಶೇ 25% |
| ಗೃಹೋತ್ಪಾದಕೇತರರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಳಕೆ ಮಾಡುವವರು (ಗ್ರಾಮ ಪಂಚಾಯತಿಯಿಂದ ಪೂರೈಕೆ ಮಾಡಲಾಗುತ್ತಿರುವ ಕೊಳಾಯಿ ನೀರನ್ನು ಬಲಕೆ ಮಾಡುವವರು + ಸ್ವಂತ ಜಲಮೂಲವನ್ನು ಹೊಂದಿರುವವರು) | ನೀರಿನ ಬಿಲ್ಲಿನ ಶೇ 25% + 500 |

***ಒಂದು ವೇಳೆ ಎಫ್‌ಎಸ್‌ಟಿಪಿ/ಎಸ್‌ಟಿಪಿಯು ಗ್ರಾಮ ಪಂಚಾಯತಿಗಳ ಸಮೂಹಕ್ಕೆ ಸೇವೆಯನ್ನು ಒದಗಿಸುತ್ತಿದ್ದಲ್ಲಿ, ಗ್ರಾಮ ಪಂಚಾಯತಿಗಳು ಬಳಕೆದಾರರ ಶುಲ್ಕವನ್ನು ಸಂಗ್ರಹಿಸತಕ್ಕದ್ದು ಮತ್ತು ಯಾವ ಗ್ರಾಮ ಪಂಚಾಯತಿಯು ಸಂಸ್ಕರಣಾ ಸ್ಥಾವರವನ್ನು ಹೊಂದಿರುತ್ತದೆಯೋ ಅಂತಹ ಗ್ರಾಮ ಪಂಚಾಯತಿಗೆ ಪಾವತಿ ಮಾಡತಕ್ಕದ್ದು. ಗ್ರಾಮ ಪಂಚಾಯತಿಗಳು ಬಳಕೆದಾರರ ಶುಲ್ಕದ ಒಂದು ಭಾಗವನ್ನು ಚರಂಡಿಗಳ ನಿರ್ವಹಣೆಗೆ ಉಳಿಸಿಕೊಳ್ಳತಕ್ಕದ್ದು.**

## ಅನುಸೂಚಿ –III

**ದಂಡನೆಗಳು**

| ಕ್ರಮ ಸಂ | ಅನುಪಾಲನೆ ಮಾಡದಿರುವ ತ್ಯಾಜ್ಯೋತ್ಪಾದಕನ ವರ್ಗ | ದಂಡನೆ(ಜುಲ್ಮಾನೆ) (ರೂಪಾಯಿಗಳಲ್ಲಿ) |
|---|---|---|
| 1 | ಮನೆಯಲ್ಲಿ ಉತ್ಪಾದನೆಯಾಗುವ ಕೊಳಕು ನೀರು/ರಾಡಿ/ಇತರ ನೀರುಗಳನ್ನು ಆತನ/ಆಕೆಯ ಆವರಣದಿಂದ ನೀರಿನ ಹರಿವು, ಜಲಮೂಲಗಳು, ಜಲಮಾರ್ಗಗಳು, ಕೃಷಿ ಭೂಮಿ ಅಥವಾ ಇತರ ಯಾವುದೇ ನಿಗದಿ ಪಡಿಸದ ಸ್ಥಳಗಳಿಗೆ ಬಿಡುವ ಅಥವಾ ಬಿಡಲು ಪ್ರೇರಣೆ ನೀಡುವವರು | 200 |
| 2 | ಮನೆಯಲ್ಲಿ ಉತ್ಪಾದನೆಯಾಗುವಂತಹ ಕೊಳಕು ನೀರನ್ನು ಗ್ರಾಮ ಪಂಚಾಯತಿಯಿಂದ ಅಗತ್ಯ ಅನುಮತಿಯನ್ನು ಪಡೆಯದೇ ಯುಕ್ತ ಗುಣಮಟ್ಟ ಮತ್ತು ನಿರ್ದಿಷ್ಟತೆಯಿಲ್ಲದೆ ಸಾರ್ವಜನಿಕ ಚರಂಡಿ ಮಾರ್ಗಕ್ಕೆ ಜೋಡಣೆ ಮಾಡಿದ ಸಂದರ್ಭದಲ್ಲಿ | 1000 |
| 3 | ಚರಂಡಿಗಳಿಗೆ(ಮೇಲ್ಮೈ ಮುಚ್ಚಿರುವ ಚರಂಡಿಗಳು ಅಥವಾ ಯುಜಿಡಿಗಳು) ಅಪಾಯವನ್ನುಂಟು ಮಾಡಬಹುದಾದ ಯಾವುದೇ ವಸ್ತುವನ್ನು ಹರಿಯಲು ಅವಕಾಶ ನೀಡಿದಲ್ಲಿ ಅಥವಾ ತ್ಯಾಜ್ಯ ನೀರು ಸಾರ್ವಜನಿಕ ಚರಂಡಿ ಮಾರ್ಗದಲ್ಲಿ ಅಥವಾ ಚರಂಡಿ ವ್ಯವಸ್ಥೆಯಲ್ಲಿ ಹರಿಯುವಲ್ಲಿ ಮಧ್ಯಪ್ರವೇಶ ಮಾಡಿದಲ್ಲಿ | 500 |
| 4 | ಕಾನೂನು ಬಾಹಿರ ಮುಂಚಾಚುವಿಕೆ ಅಥವಾ ಒತ್ತುವರಿಯ ಮೂಲಕ ಚರಂಡಿಗಳಿಗೆ ಹಾನಿಯನ್ನುಂಟು ಮಾಡಿದಲ್ಲಿ | 1000 |
| 5. | ಕೈಗಾರಿಕಾ ದ್ರವ ತ್ಯಾಜ್ಯವನ್ನು ಅಥವಾ ಕೈಗಾರಿಕಾ ಚಟುವಟಿಕೆಗಳಿಗೆ, ಗೃಹ ಕೈಗಾರಿಕೆಗಳು, ಕಸಾಯಿ ಖಾನೆ ಮತ್ತು ಮಾಂಸದ ಮಾರುಕಟ್ಟೆ, ಹೈನುಗಾರಿಕೆ ಮತ್ತು ಜಾನುವಾರುಗಳ ಕೊಟ್ಟಿಗೆ, ಕಾರ್ಯಾಗಾರಗಳು ಅಥವಾ ಗರಾಜುಗಳಿಗೆ ಸಂಬಂಧಿಸಿದ ಯಾವುದೇ ದ್ರವ ತ್ಯಾಜ್ಯವನ್ನು ಸೂಕ್ತ ಸಂಸ್ಕರಣೆ ಮಾಡುವ ಮುನ್ನವೇ ಸಾರ್ವಜನಿಕ ಚರಂಡಿಗೆ ಹರಿಸಿದಲ್ಲಿ ಅಥವಾ ಹರಿಸಲು ಪ್ರೇರಣೆ ನೀಡಿದಲ್ಲಿ | 2000 |
| 6 | ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಉಗಿದರ, ಮಲ ಮೂತ್ರ ವಿಸರ್ಜನೆ ಮಾಡಿದಲ್ಲಿ | 100 |
| 7 | ಅನುಮತಿಯಿಲ್ಲದೆ ವಾಹನಗಳು, ಮುಚ್ಚಿದ ಚರಂಡಿಗಳ ಮೇಲ್ಮೈ, ಆಳುಗುಂಡಿ ಮುಚ್ಚಳಗಳು, ಚರಂಡಿಗಳು ಮತ್ತು ಉಪಕರಣಗಳಿಗೆ ಯಾವುದೇ ಹಾನಿಯನ್ನುಂಟು ಮಾಡಿದಲ್ಲಿ ಅಥವಾ ತೆರವುಗೊಳಿಸಿದಲ್ಲಿ | 500 |
| 8 | ಮೇಲೆ ಗುರುತಿಸಲಾರದ ಇತರ ಸ್ಥಳಗಳು/ಕಾರ್ಯಚಟುವಟಿಕೆಗಳು | ಸಾಮಾನ್ಯ/ಅಥವಾ ವಿಶೇಷ ಆದೇಶ/ಅಧಿಸೂಚನೆಯ ಮೂಲಕ ಗ್ರಾಮ ಪಂಚಾಯತಿಯು ತೀರ್ಮಾನಿಸಿದಂತೆ |

## ಅನುಸೂಚಿ –IV

### ನಿಯಂತ್ರಣಾ ಘಟಕಗಳ ದತ್ತಾಂಶವನ್ನು ಸಂಕಲನ ಮಾಡುವ ಸಲುವಾಗಿ ಸರ್ವೇ ನಮೂನೆಯ ಪ್ರಮಾಣ ಫಲಕ

| ಆಸ್ತಿಯ ವಿವರಗಳು | **(ಈ ವಿವರಗಳನ್ನುಗ್ರಾಮ ಪಂಚಾಯತಿಯ ಆಸ್ತಿ ರಿಜಿಸ್ಟರಿನಿಂದ ಸಿದ್ಧವಾಗಿ ಪಡೆಯಬಹುದು)** |
|---|---|
| ವಾಸದ ಮನೆಯು ಶೌಚಾಲಯವನ್ನು ಹೊಂದಿರುವುದೇ | ಹೌದು/ಇಲ್ಲ |
| ವಾಸದ ಮನೆಯಲ್ಲಿರುವ ಶೌಚಾಲಯಗಳ ಸಂಖ್ಯೆ | |
| ಶೌಚಾಲಯದ ಮಾದರಿ | |
| ಶೌಚಾಲಯದ ತೊಟ್ಟಿ(ಹೊಂಡ) | ಏಕಗುಂಡಿ/ದ್ವಿಗುಂಡಿ/ರೊಚ್ಚುತೊಟ್ಟಿ/ಇತರ ಯಾವುದೇ ವಿಧ |
| ಶೌಚಾಲಯ ಹಾಗೂ ತೊಟ್ಟಿಯ ನಿರ್ಮಾಣ | ದೋಷಪೂರ್ಣ/ವಿನ್ಯಾಸದ ರೀತ್ಯ |
| ಶೌಚಾಲಯ ಮತ್ತು ತೊಟ್ಟಿಯ ಭೌತಿಕ ಪರಿಸ್ಥಿತಿ | |
| ಸ್ವಚ್ಛಗೊಳಿಸುವ ಅವಧಿಯ ಅಂತರ | ಪ್ರತಿ ಆರು ತಿಂಗಳು/ಪ್ರತಿ ವರ್ಷ/ಪ್ರತಿ ಎರಡು ವರ್ಷ/ಇಲ್ಲವೇ ಇಲ್ಲ |
| ಹೊಂಡ/ರೊಚ್ಚುಗುಂಡಿಯ ಸ್ವಚ್ಛತಾ ಸೇವೆಗಳಿಗೆ ಯಾರನ್ನು ಸಂಪರ್ಕಿಸಲಾಗುತ್ತದೆ | (ಏಜೆಂಟನ ಹೆಸರು) |
| ಮನೆಯಲ್ಲಿ ವಾಸ್ತವವಾಗಿ ವಾಸ ಮಾಡುತ್ತಿರುವ ವ್ಯಕ್ತಿಗಳ ಸಂಖ್ಯೆ | |
| ಮನೆಯು ನೀರಿನ ಸಂಪರ್ಕವನ್ನು ಹೊಂದಿರುವುದೇ | |
| ಶೌಚಾಲಯ ಮತ್ತು ಕುಡಿಯುವ ನೀರಿನ ಮೂಲದ ನಡುವಿನ ದೂರ | |
| ರೊಚ್ಚುಗುಂಡಿ/ಹೊಂಡವುಳ್ಳ ಶೌಚಾಲಯದ ವಿವರಗಳು | |
| ಯೋಜನೆಯ ರೀತ್ಯ ಸಾಮರ್ಥ್ಯ | (ಗ್ರಾಮ ಪಂಚಾಯತಿಯ ದಾಖಲೆಗಳಿಂದ ಪಡೆಯಬಹುದು |
| ವಾಸ್ತವ ಸಾಮರ್ಥ್ಯ | |
| ಹೊಂಡ/ರೊಚ್ಚುಗುಂಡಿ ಇರುವ ಸ್ಥಳ | ಮನೆಯ ಪ್ರವೇಶದ ಮುಂಭಾಗದಲ್ಲಿ/ಮನೆಯ ಹಿಂಭಾಗದಲ್ಲಿ |
| ರೊಚ್ಚು ತೆರವುಗೊಳಿಸುವ ಟ್ರಕ್ಕು ಸುಲಭವಾಗಿ ಹೊಂಡ/ರೊಚ್ಚುಗುಂಡಿಯನ್ನು ತಲುಪಲು ಸಾಧ್ಯವಾಗುವುದೇ | |
| ಬೂದು ನೀರನ್ನು ಮುಕ್ತವಾಗಿ ಹರಿಯಬಿಡಲಾಗುವುದೇ | ಹೌದು/ಇಲ್ಲ |
| ಇಲ್ಲದಿದ್ದಲ್ಲಿ, ಅದನ್ನು ಚರಂಡಿಗೆ ಹರಿಯ ಬಿಡಲಾಗುತ್ತಿದೆಯೇ | ಹೌದು/ಇಲ್ಲ |
| ಮನೆಯ ಸುತ್ತ ಇಂಗುಗುಂಡಿ ನಿರ್ಮಾಣಕ್ಕಾಗಿ ಸ್ಥಳಾವಕಾಶವಿದೆಯೆ | ಹೌದು/ಇಲ್ಲ |

## ನಮೂನೆ–1 (ಉಪವಿಧಿ 21(ಜಿ) ಯನ್ನು ನೋಡಿರಿ

## ಅಪಘಾತ ವರದಿ ಮಾಡುವುದು

| ಕ್ರಮ ಸಂ | ವಿವರಗಳು | ದತ್ತಾಂಶ |
|---|---|---|
| 1 | ಅಪಘಾತ ನಡೆದ ದಿನಾಂಕ ಮತ್ತು ಸಮಯ | |
| 2 | ಅಪಘಾತಕ್ಕೆ ಕಾರಣವಾದ ಘಟನೆಗಳ ಸರಣಿ | |
| 3 | ಅಪಘಾತದಲ್ಲಿ ಒಳಗೊಂಡ ತ್ಯಾಜ್ಯ | |
| 4 | ಮಾನವನ ಆರೋಗ್ಯ ಮತ್ತು ಪರಿಸರದ ಮೇಲೆ ಅಪಘಾತವು ಬೀರುವ ಪರಿಣಾಮಗಳ ನಿರ್ಧರಣೆ | |
| 5 | ಕೈಗೊಳ್ಳಲಾದ ತುರ್ತು ಕ್ರಮ | |
| 6 | ಅಪಘಾತದ ಪರಿಣಾಮಗಳನ್ನು ಕಡಿಮೆ ಮಾಡಲು ಕೈಗೊಂಡ ಕ್ರಮಗಳು | |
| 7 | ಅಂತಹ ಅಪಘಾತಗಳು ಮರುಕಳಿಸುವುದನ್ನು ತಡೆಗಟ್ಟಲು ಕೈಗೊಳ್ಳಲಾದ ಕ್ರಮಗಳು | |

| | |
|---|---|
| **ದಿನಾಂಕ** | **ಸಹಿ** |
| ಸ್ಥಳ | **ಪದನಾಮ** |

---------